₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXXIII - 6 June 2015

PAGES 16






**The Mysore Association, Bombay**

393, Bhau Daji Road, Matunga, Mumbai - 400 019.
Tel.: 2402 4647, 2403 7065 ● Fax : 2401 0574
Email : mysoreassociation.mumbai@gmail.com

# ಗೀತಾ ವಿಶ್ವನಾಥ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಮೈಸೂರು ಅಸೋಸಿಯೇಷನ್ನಿನ ಒಬ್ಬ ಒಳ್ಳೆಯ ಕಲಾವಿದ ಸದಸ್ಯೆ ಶ್ರೀಮತಿ ಗೀತಾ ವಿಶ್ವನಾಥ್ 24.05.2015 ರ ಬೆಳಿಗ್ಗೆ ಸಿಂಗಪೂರ್‌ನಲ್ಲಿ ಮಗಳು ಶಾರ್ವರಿಯ ಮನೆಯಲ್ಲಿ ಹೃದಯಾಘಾತದಿಂದ ವಿಧಿ ವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀಮತಿ ಗೀತಾ ವಿಶ್ವನಾಥ್ ಅಸೋಸಿಯೇಷನ್‌ನಲ್ಲಿ ಕಲಾವಿಭಾಗದ ಸಕ್ರಿಯ ಸದಸ್ಯೆಯಾಗಿದ್ದರು. ಅಂತರಾಷ್ಟ್ರೀಯ ಖ್ಯಾತಿಯ ನೃತ್ಯಕಲಾವಿದೆಯಾಗಿದ್ದರು. ಅವರು ಬರೆದು ಆಡಿಸಿದ ಹಲವು ನೃತ್ಯ ರೂಪಕಗಳು ಈಗಲೂ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ. 'ಶ್ಯಾಮಲಾ ದಂಡಕಮ್', 'ಕೋಳೂರು ಕೊಡಗೂಸು, 'ಶ್ರೀಕೃಷ್ಣ ಪಾರಿಜಾತ' ಮೊದಲಾದವು ಬಹಳ ಶ್ರೇಷ್ಠ ಪ್ರದರ್ಶನಗಳಾಗಿದ್ದವು. ಅವರು ಅನೇಕ ನಾಟಕಗಳನ್ನು ಬರೆದು ಆಡಿಸಿದರು. ಅವರು ಬರೆದ ಕಥಾ ಸಂಕಲನ ಮತ್ತು ಮನೋಚಿಕಿತ್ಸಕ ಲೇಖನಗಳ ಪುಸ್ತಕಗಳು ನವಕರ್ನಾಟಕ ಪ್ರಕಾಶನದಿಂದ ಪ್ರಕಟವಾಗಿದೆ.

ಅಸೋಸಿಯೇಷನ್ನಿನ ಹಿರಿಯ ಸದಸ್ಯರೂ, ಅಧ್ಯಕ್ಷರೂ ಆಗಿದ್ದರೂ ಆಗಿದ್ದ ಮುಂಬಯಿಯ ಶ್ರೀ. ವರದರಾಜನ್ ಅವರ ಎರಡನೆಯ ಸೊಸೆಯಾಗಿ ಶ್ರೀ ವಿಶ್ವನಾಥ್ ಅವರ ಪತ್ನಿಯಾಗಿ ಮುಂಬಯಿಗೆ ಕಾಲಿಟ್ಟರು. ಆ ವೇಳೆಗಾಗಲೇ ಆಕೆ ನೃತ್ಯ ವಿಶಾರದೆಯಾಗಿ ಹೆಸರು ಗಳಿಸಿದ್ದರು. ಪತಿಯ ಮನೆಯ ಪ್ರೋತ್ಸಾಹದಾಯಕ ವಾತಾವರಣದಲ್ಲಿ ಅವರ ಕಲೆ ಇನ್ನಷ್ಟು ಪುಟಗೊಂಡು ಸರ್ವತೋಮುಖವಾಗಿ ಬೆಳೆಯಿತು. ನೃತ್ಯವಲ್ಲದೆ, ನಾಟಕ, ಕಥೆ, ಲೇಖನ ಕಾರ್ಯ, ಸಮಾಜ ಕಾರ್ಯ ಎಲ್ಲದರಲ್ಲೂ ಅವರು ತೊಡಗಿಕೊಂಡಿದ್ದರು.

ಶ್ರೀ. ವಿಶ್ವನಾಥ್ ಅವರ ವಿಯೋಗದ ನಂತರ ಅವರು ಹಿಂತಿರುಗಿ ಬೆಂಗಳೂರಿಗೆ ಹೋಗಿ ನೆಲೆಸಿದ್ದರು. ಈಗ್ಗೆ ಕೆಲವು ವರ್ಷಗಳಿಂದ ಸಿಂಗಪೂರ್‌ನಲ್ಲಿ ಮಗಳ ಜೊತೆ ವಾಸವಾಗಿದ್ದರು.

ಶನಿವಾರ 30 ಮೇ 2015 ಸಂಜೆ 6.30 ಕ್ಕೆ ಸಂತಾಪ ಸೂಚಕ ಸಭೆಯನ್ನು ಏರ್ಪಡಿಸಲಾಗಿತ್ತು. ಸ್ನೇಹಿತರು, ಬಂಧುಗಳು ಹಿತೈಷಿಗಳು ಭಾಗವಹಿಸಿ, ಸಂತಾಪವನ್ನು ಸೂಚಿಸಿದರು.



ಮುಂಬೈಯ ಹಿರಿಯ ಸಾಹಿತಿ ಡಾ. ಸುನೀತಾ ಶೆಟ್ಟಿಯವರು ಗೀತಾ ವಿಶ್ವನಾಥ್‌ರವರ ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿ, ಮಾತನಾಡಿದರು.

ಮೈಸೂರು ಅಸೋಸಿಯೇಷನ್ ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ. ಅವರ ಮಕ್ಕಳು ಶಾರ್ವರಿ ಹಾಗೂ ಶೃತಾ ಮತ್ತು ಎಲ್ಲ ಕುಟುಂಬಿಕ ಸದಸ್ಯರಿಗೆ ಈ ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತದೆ.

## ಮೇಥಿ ಮಲಾಯಿ ಮಟರ್



**ಬೇಕಾಗುವ ಸಾಮಗ್ರಿಗಳು:** ಮೆಂತ ಸೊಪ್ಪು 1 ಕಪ್, ಬೇಯಿಸಿದ ಬಟಾಣಿ 1 ಕಪ್, ಕಸ್ತೂರಿ ಮೇಥಿ 1 ಟೀ ಸ್ಪೂನ್, ಉಪ್ಪು ರುಚಿಗೆ ತಕ್ಕಷ್ಟು, ಪನ್ನೀರ್ ತುಂಡು 1/2 ಕಪ್, ಹಾಲು 1/2 ಕಪ್, fresh cream 1 ಕಪ್, ಬಿಳಿ ಮೆಣಸಿನ ಪುಡಿ 1 ಟೀ ಸ್ಪೂನ್, ನೀರು 1/2 ಕಪ್

**ರುಬ್ಬುವುದಕ್ಕೆ :-** ಈರುಳ್ಳಿ 1, ಚಕ್ಕೆ 1, ಲವಂಗ 2, ಮೊಸರು 2 ಟೀ ಸ್ಪೂನ್

ವಿಧಾನ: ಬಾಣಲೆಗೆ ಒಲೆಯ ಮೇಲಿಟ್ಟು ರುಬ್ಬಿದ ಮಿಶ್ರಣವನ್ನು ಸೇರಿಸಿ ಚೆನ್ನಾಗಿ ಹುರಿಯಿರಿ. ಅದಕ್ಕೆ ನೀರು ಬೇಯಿಸಿದ ಬಟಾಣಿ, ಕಸ್ತೂರಿ ಮೇಥಿ ಮತ್ತು ಉಪ್ಪನ್ನು ಸೇರಿಸಿ ಚೆನ್ನಾಗಿ ಕಲಕಿರಿ. ನಂತರ ಪನ್ನೀರ ತುಂಡು, ಹಾಲು fresh cream ಬಿಳಿಮೆಣಸಿನ ಪುಡಿ ಮತ್ತು ಮೆಂತೆಸೊಪ್ಪನ್ನು ಹಾಕಿ ಚೆನ್ನಾಗಿ ಕಲಕಿರಿ. 10 ನಿಮಿಷ ಬೇಯಿಸಿ. ಈಗ ಮೇಥಿ ಮಲಾಯಿ ಮಟರ್ ರೆಡಿ ಯಾಗಿದೆ.

– ಶ್ರೀಮತಿ ಭಾವನಾ ಮಧುಸೂದನ್

ಗೌ. ಸಂಪಾದಕರು :
**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:
**ಡಾ. ಮಂಜುನಾಥ್**
**ಕೆ. ಮಂಜುನಾಥಯ್ಯ**
**ನಾರಾಯಣ ನವಿಲೇಕರ್**
**ಗಣಪತಿ ಶಂಕರಲಿಂಗ**
**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :
**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.
*- Ed.*

❖ ❖❖

ಸಂಪರ್ಕ ವಿಳಾಸ :
**ನೇಸರು**
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

## *ಸಂಪಾದಕೀಯ*

# ನೇಸರು
## ತಿಂಗಳೋಲೆ

**ಸಂಪುಟ 33** **ಜೂನ್ 2015** **ಸಂಚಿಕೆ 6**

ಬದುಕು ಅಂದರೆ ಹೀಗೆ ನಿರ್ಧರಿಸುವಂತಿಲ್ಲ. ಯಾವ ಕ್ಷಣದಲ್ಲಿ ಏನಾಗುತ್ತದೆ ಅಂತ ನಾವು ಖಡಾಖಂಡಿತವಾಗಿ ಹೇಳುವಂತಿಲ್ಲ. 'ಇಂದು' ನಿಂತುಕೊಂಡು 'ನಾಳೆ'ಯ ಬಗ್ಗೆ ಯೋಚಿಸುತ್ತಿದ್ದರೆ, ನಮಗೆ 'ಇಂದು' ಎಂಬುದು ಗೋಚರವಾಗುವುದಿಲ್ಲ. 'ಇಂದಿ'ನಷ್ಟು ಅಮೂಲ್ಯವಾದುದು ಮತ್ತ್ಯಾವುದೂ ಇಲ್ಲ. ಅದಕ್ಕಿಂತ ಅಮೂಲ್ಯವಾದುದು ಇದ್ದರೆ ಅದು 'ಇವತ್ತು' ಅಥವಾ 'ಈಗ' ಎನ್ನುವುದು. ಹಾಗಿದ್ದರೆ, ಕಾಣದ 'ನಾಳೆ'ಯ ಬಗ್ಗೆ ಚಿಂತಿಸದೇ, ಕಾಣುವ 'ಇವತ್ತಿನ' ದಿನವನ್ನು ಚೆನ್ನಾಗಿ ಸದುಪಯೋಗ ಪಡಿಸಿಕೊಳ್ಳುವುದು ಉತ್ತಮವಲ್ಲವೇ?. ಬದುಕಿನಲ್ಲಿ ಆಶಾವಾದ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಆಶಾವಾದಿ 'ಇದೆ' ಎನ್ನುತ್ತಾನೆ. ನಿರಾಶಾವಾದಿ 'ಇಲ್ಲ' ಎನ್ನುತ್ತಾನೆ. ಒಂದಕ್ಷರದ ವ್ಯತ್ಯಾಸದಲ್ಲಿ ಬದುಕುವ ಪರಿಯೇ ಬದಲಾಗುತ್ತದೆ.

"ಬೆಳಕು ಎಂದರೆ ಕರುಣಾಳು, ಕೈ ಹಿಡಿದು ಮುನ್ನೆಡೆಸುವಷ್ಟು ದಯಾಳು. ಬೆಂಕಿ ಹಾಗಲ್ಲ. ನಮ್ಮನ್ನೇ ಸುಟ್ಟು ಬಿಡುವಷ್ಟು ಉದಾರಿ. ಅಂಥ ಉದಾರಿ ನಮಗೆ ಬೇಕಿಲ್ಲ. ಪುಟ್ಟ ಕಣ್ಣುಗಳ ಕರುಣಾಳು ಸಾಕು" ಎಂದು ಅರವಿಂದ ನಾವುಡ ಅವರು ಒಂದೆಡೆ ಉಲ್ಲೇಖಿಸುತ್ತಾರೆ. ಕುರುಡು ಅನುಕರಣೆ ಯಾವತ್ತೂ ನಮ್ಮನ್ನು ಬೆಳೆಸುವುದಿಲ್ಲ. ವ್ಯಕ್ತಿಗತ ಚಿಂತನೆ ಬಹಳ ಮುಖ್ಯವಾದುದು. 'ಏನು' ಮಾಡುವುದು? ಎನ್ನುವುದಕ್ಕಿಂತ ಹೇಗೆ ಮಾಡುವುದು ಎನ್ನುವ ಯೋಚನೆ ಬಂದೊಡನೆಯೇ ನಮ್ಮ ಬದುಕಿನ ಹಲವಾರು ಚಿಂತೆಗಳು ದೂರಾಗುವುದರಲ್ಲಿ ಸಂದೇಹವೇ ಇಲ್ಲ. ಮೊನ್ನೆ ಮೊನ್ನೆಯಷ್ಟೇ ನಡೆದ ಘಟನೆಯನ್ನು ಸ್ಮರಿಸಿಕೊಳ್ಳಿ.

ಮೊನ್ನೆ ಮೊನ್ನೆಯಷ್ಟೇ ನಡೆದ ಘಟನೆಯನ್ನು ನೆನಪಿಸಿಕೊಳ್ಳಿ. ರೋಗಿಗಳ ಸೇವೆಯೇ ತನ್ನ ಜೀವನದ ಗುರಿ ಅಂದುಕೊಂಡಿದ್ದ ಅರುಣಾಳ ಕರುಣಾಜನಕ ಕಥೆ ನಮ್ಮೆಲ್ಲರ ಕಣ್ಣಂಚನ್ನು ಒದ್ದೆ ಮಾಡಿಸುತ್ತದೆ. 42ವರ್ಷ ಜೀವಂತ ಶವವಾಗಿ ಬದುಕಿದ ಅರುಣಾ ದಾದಿಯ ಬದುಕು ಮೇ 18ರಂದು ತಾರ್ಕಿಕ ಅಂತ್ಯ ಕಂಡಿತು. 42ವರ್ಷ ಅನುಭವಿಸಿದ ಈ ಯಾತನಾಮಯ ಬದುಕಿಗೆ ಹಾಗೂ ಆಸ್ಪತ್ರೆಯ ಇತರ ದಾದಿಯಂದಿರು ಮತ್ತು ವೈದ್ಯರು ತೋರಿಸಿದ ಮಾನವೀಯತೆಯ ಅಧ್ಯಾಯಕ್ಕೆ ಕೊನೆಗೂ ತೆರೆಬಿದ್ದಿತು. ವಿಧಿಯ ವಿಪರ್ಯಾಸ ನೋಡಿ, ರೋಗಿಗಳ ಸೇವೆ ಮಾಡುವ ಕನಸನ್ನು ಹೊತ್ತುಕೊಂಡು ಹುಟ್ಟೂರಿನಿಂದ ಮುಂಬಯಿಗೆ ಬಂದರು. ಆದರೆ ಇಲ್ಲಿ ಆದದ್ದೇನು? ಅವರೇ ಆಸ್ಪತ್ರೆಯ ಹಾಸಿಗೆಯ ಮೇಲೆ ತಮ್ಮ ಇಡೀ ಜೀವನವನ್ನು ಕಳೆಯುವಂತಾಯಿತು.. 42 ವರ್ಷ ಒಂದೇ ಕೋಣೆಯಲ್ಲಿ ಒಂದೇ ಹಾಸಿಗೆಯಲ್ಲಿರುವುದು ಅಂದರೆ ಸುಲಭದ ಮಾತಲ್ಲ. ನಾವು ಒಂದು ಜ್ವರದಿಂದಾಗಿ ಎರಡು ಮೂರು ದಿನ ಹಾಸಿಗೆಯಲ್ಲಿದ್ದರೆ ಸಾಕಪ್ಪ ಅನಿಸಿಸುತ್ತದೆ. ಕೋಮಾ ಅನ್ನೋದು ಸಾವಿನ ಮನೆಯ ಬಾಗಿಲನ್ನು ತಟ್ಟಿದ ಹಾಗೆ. ಯಾವಾಗ ಬೇಕಾದರೂ ತೆರೆಯಬಹುದು. ಮದುವೆಯಾಗಿ ತನ್ನ ಬಾಳಸಂಗಾತಿಯ ಮನೆ–ಮನವನ್ನು ಬೆಳಗಬೇಕಾಗಿದ್ದ ಸಮಯದಲ್ಲಿ ಹಾಸಿಗೆ ಹಿಡಿದಳು ಅರುಣಾ. ಅದು ಕೂಡ ಯಾರದೋ ವಿಕೃತ್ಯಕ್ಕೆ ಬಲಿಯಾಗಿ. ಏನೂ ತಪ್ಪಿಲ್ಲದ ಬಹುಶಃ ಕೇವಲ ಹೆಣ್ಣಾಗಿ ಹುಟ್ಟಿದ್ದಕ್ಕೆ ತನ್ನ ಇಡೀ ಜೀವಮಾನವನ್ನು ಹಾಸಿಗೆಯಲ್ಲಿ ಜೀವಂತ ಶವವಾಗಿ ಕಳೆಯಬೇಕಾಯಿತು. ಅರುಣಾಳ ಬದುಕು ಒಂದು ದುರಂತ ಕಥೆಯಾಗಿ ನಮ್ಮೆದುರು ಕಾಣಿಸಿಕೊಳ್ಳುತ್ತದೆ. ಈಗ ಅರುಣಾರವರದು ನೆನಪು ಮಾತ್ರ. ಅರುಣಾರವರನ್ನು 42ವರ್ಷದಿಂದ ಬಹಳಷ್ಟು ಮುತುವರ್ಜಿಯಿಂದ ನೋಡಿಕೊಂಡ ಕೆ.ಇ.ಎಂ ಆಸ್ಪತ್ರೆಯ ದಾದಿಗಳು, ವೈದ್ಯರು ಮೆರೆದ ಮಾನವೀಯತೆ ಶ್ಲಾಘನೀಯವಾದುದು. ರೋಗಿಗಳ ಸೇವೆಯೇ ತನ್ನ ಗುರಿಯೆಂದುಕೊಂಡು ನೂರಾರು ಹೊಂಗನಸುಗಳನ್ನು ಕಟ್ಟಿಕೊಂಡ ಅರುಣಾರವರ ಕನಸು ಕನಸಾಗಿಯೇ ಉಳಿಯಿತು.. ಕನ್ನಡತಿ ಅರುಣಾ ಶ್ಯಾನುಭಾಗ್ ಅವರ ಆತ್ಮಕ್ಕೆ ಆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಮನಸಾ ಹಾರೈಸೋಣ.

**– ಡಾ. ಜ್ಯೋತಿ ಸತೀಶ್**

# ಶ್ರೀಮತಿ ಮಣಿಕರ್ಣಿಕಾ / ಶಾರದಾ

### ಆದ್ಯ ರಂಗಾಚಾರ್ಯ

ಮಣಿಕರ್ಣಿಕಾ ಪತಿಯ ಇಚ್ಛೆಯಂತೆ ಶಾರದೆಯಾಗಿ ಪತಿಯ ಗೃಹವನ್ನಲಂಕರಿಸಿದರು. ಶ್ರೀರಂಗರಾದ ಆದ್ಯ ರಂಗಾಚಾರ್ಯರ ಮನೆ ಮನದ ಶಾರದೆಯೇ ಆದರು. ಎಲ್ಲ ದೃಷ್ಟಿಯಿಂದಲೂ ಶ್ರೀರಂಗ ದಂಪತಿಗಳದು ಆದರ್ಶ ದಾಂಪತ್ಯ. 'ಶ್ರೀರಂಗರು ಸಂಸಾರ ಮಾಡುವರೇ?' ಎಂದು ಅವರನ್ನು ಬಲ್ಲವರು ಕೇಳುತ್ತಿದ್ದ ಕಾಲ ಒಂದಿತ್ತು. ಆದರೆ, ಇಂದು ತಮ್ಮ ಸಹಜ ಗಾಂಭೀರ್ಯ, ಪ್ರೀತಿ, ಸೌಜನ್ಯಗಳಿಂದ ಪತಿಯನ್ನು ಮಮತಾ ಬಂಧನಕ್ಕೆ ಸಿಲುಕಿದ ಸಾಹಸ ಶ್ರೀಮತಿ ಶಾರದ ಆದ್ಯ ಅವರದು.

### ಸಕ್ಕರಿ ಬೆರೆದ್ಹಾಂಗ ಹಾಲಾಗ :

ಪ್ರೊಫೆಸರ್ ಆದ್ಯರಂಗಾಚಾರ್ಯರು ಜಹಗೀರದಾರರ ಶ್ರೀಂತ ಮನೆತನದಲ್ಲಿ ಹುಟ್ಟಿ ಬೆಳೆದಿದ್ದರೂ ಅವರು ಕೆಲಸಕ್ಕೆ ಸೇರುವ ವೇಳೆಗೆ ಸಂಪತ್ತು ಬಹಳಮಟ್ಟಿಗೆ ಕರಗಿಹೋಗಿತ್ತು. ಪ್ರತಿ ದಿವಸವೂ ಇವರು ಕಾಲೇಜಿಗೆ ಬೈಸಿಕಲ್ಲಿನಲ್ಲಿ ಹೋಗಿಬರುತ್ತಿದ್ದರು. ಇನ್ನೂ ಮದುವೆ ಆಗದೆ ಇದ್ದ, ವಿದ್ಯಾರ್ಥಿನಿಯಾಗಿದ್ದ ಶಾರದಾಬಾಯಿಯವರೂ ಶ್ರೀಮಂತ ಮನೆತನದಲ್ಲಿಯೇ ಹುಟ್ಟಿ ಬೆಳೆದು ಪ್ರತಿ ದಿವಸ ಕಾರಿನಲ್ಲಿ ಕಾಲೇಜಿಗೆ ಬಂದುಹೋಗುತ್ತಿದ್ದರು. ಶಾರದಾಬಾಯಿಯವರು ಬಿ.ಎ. ಮುಗಿಸಿದರು. ಎರಡು ವರುಷಗಳ ಅನಂತರ ಪ್ರೊಫೆಸರ್ ಜೊತೆಯಲ್ಲಿ ಶಾರದಾಬಾಯಿಯವರ ಮದುವೆ ಆಯಿತು. ರಂಗಾಚಾರ್ಯರಿಗೆ ಇದ್ದ ಆಶ್ಚರ್ಯ ಹೋಗಿತ್ತು. ಶ್ರೀಮತಿ ಶಾರದಾಬಾಯಿಯವರು ಇದ್ದ ಐಶ್ವರ್ಯ ಬಿಟ್ಟು ಬಂದು ಪತಿಯ ಗೃಹವನ್ನು ಸೇರಿದರು. ಇಬ್ಬರೂ ಸರಸ್ವತಿಯ ಭಕ್ತರೇ ಹೊರತು ಲಕ್ಷ್ಮಿಯ ಭಕ್ತರಲ್ಲ. ಹೀಗಾಗಿ ಇವರಿಬ್ಬರ ಜೋಡಿ ಹಾಲಿಗೆ ಸಕ್ಕರೆ ಬೆರೆತಂತಾಯಿತು. ಇದರಿಂದಾಗಿ ಶ್ರೀರಂಗರ ದಾಂಪತ್ಯ ಜೀವನ ಅತ್ಯಂತ ಮಧುರವಾಗಿ ಸಾಗಿತು. ಸಾಹಿತ್ಯದೇವಿಯ ಆರಾಧನೆಗೆ ಕೋಡು ಮೂಡಿದಂತಾಯಿತು.

### ಸಹಜ ಸರಸ್ವತಿಯೇ ಆಗಿ

ಶ್ರೀಮತಿ ಶಾರದಾಬಾಯಿಯವರ ಮೊದಲ ಹೆಸರು ಮಣಿಕರ್ಣಿಕಾ. ಆದರೆ, ಸರಸ್ವತಿಯ ಭಕ್ತರಾದ ಶ್ರೀರಂಗರಿಗೆ ತಮ್ಮ ಸಹಧರ್ಮಿಣಿ 'ಶಾರದೆ'ಯಾಗಿ ತಮ್ಮ ಮನೆಯನ್ನು ಪ್ರವೇಶಿಸಬೇಕು ಎನ್ನುವ ಬಯಕೆ. ತಮ್ಮ ಆಸೆಯನ್ನು ಮಡದಿಗೆ ಹೀಗೆ ಬರೆದು ತಿಳಿಸಿದರು... "As an humble devotee myself of Sharada, - I am thrilled with admiration in bestowing that name on you".

ಇವರ ಬಯಕೆ ನೆರವೇರಿತು. ಶ್ರೀಮತಿ ಮಣಿಕರ್ಣಿಕಾ ಕೇವಲ ಶಾರದ, ಎನ್ನವ ಹೆಸರನ್ನು ಧರಿಸಿ ಇವರಲ್ಲಿಗೆ ಬರಲಿಲ್ಲ! ಸಹಜ ಸರಸ್ವತಿಯೇ ಆಗಿ ಇವರ ಮನೆಯನ್ನು ಪ್ರವೇಶಿಸಿದರು.

### ಪದವೀಧರೆ

ಶ್ರೀಮತಿ ಶಾರದಾಬಾಯಿಯವರು ಪೂನಾದಲ್ಲಿ ಪ್ರಸಿದ್ಧ ವಕೀಲರಾಗಿದ್ದ ನರಸಿಂಹ ಬಾಲಕೃಷ್ಣ ಚಂದ್ರಚೂಡರ ಹಾಗೂ ಗಂಗಾಬಾಯಿಯವರ ಮಗಳು. ಮೇಧಾವಿಗಳೂ, ವಾಗ್ಮಿಗಳೂ ಆದ ನರಸಿಂಹ ಬಾಲಕೃಷ್ಣ ಚಂದ್ರಚೂಡರು ಶ್ರೇಷ್ಠದಾನಿಗಳೂ ಆಗಿದ್ದರು. ಸಂಸ್ಕೃತ, ಇಂಗ್ಲಿಷಿನಲ್ಲಿ ಆಳವಾದ ಅಭ್ಯಾಸ ನಡೆಸಿದ್ದರು. ಇವರಿಗೆ ವಿದ್ಯೆಯ ಬಗೆಗೆ ಬಹಳ ಆಸಕ್ತಿ. ಅನೇಕ ಬಡ ವಿದ್ಯಾರ್ಥಿಗಳಿಗೆ ಧನಸಹಾಯದಿಂದ ಹಿಡಿದು ಊಟವನ್ನು ಹಾಕಿಸಿ, ವಿದ್ಯೆ ಕಲಿಯಲು ಅನುಕೂಲವನ್ನು ಒದಗಿಸಿಕೊಡುತ್ತಿದ್ದರು. ಇಷ್ಟರಿಂದಲೇ ಇವರಿಗೆ ತೃಪ್ತಿಯಾಗದೆ ಇವರ ಕೆಲವು ಅಭಿಪ್ರಾಯಗಳನ್ನು ಮುಂದಿಟ್ಟು ಅವರೆಲ್ಲರ ಸಹಾಯ, ಸಹಕಾರದಿಂದ 'ಋಗ್ವೇದಿ ದೇಶಸ್ಥ ಬ್ರಾಹ್ಮಣರ ಸಂಸ್ಥೆ' ಎಂದು ಒಂದು ಸಂಸ್ಥೆಯನ್ನು ಸ್ಥಾಪಿಸಿ ಆ ಮೂಲಕ ಅನೇಕ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದರು. ಅನ್ನದಾನ, ವಿದ್ಯಾದಾನ ಅತ್ಯಂತ ಶ್ರೇಷ್ಠವೆಂದು ನಂಬಿ ನುಡಿದರು. ಎಂ.ಎಲ್.ಎ. ಆಗಿದ್ದ ಇವರು ರಾಜಕೀಯದಲ್ಲೂ ಪ್ರಮುಖ ಪಾತ್ರ ವಹಿಸಿದ್ದರು. ಇವರು ಅಧ್ಯಾಪಕರಾಗದೇ ಇದ್ದರೂ ಬಹಳ ಚೆನ್ನಾಗಿ ಪಾಠವನ್ನು ಉಪದೇಶಿಸುತ್ತಿದ್ದರು. ಶ್ರೀಮತಿ ಶಾರದಾಬಾಯಿಯವರಿಗೆ ಇವರೇ ಇಂಗ್ಲಿಷ್ ಸಂಸ್ಕೃತ ಕಲಿಸಿದ ಗುರು. ನಮ್ಮ ತಂದೆಯವರು ಕಲಿಸಿದ ವಿದ್ಯೆ ಇಂದಿಗೂ ನನ್ನ ನೆನಪಿನಲ್ಲಿದೆ. ಅಷ್ಟು ಚೆನ್ನಾಗಿ ಅವರು ಕಲಿಸಿಕೊಟ್ಟಿದ್ದಾರೆ ಎನ್ನುತ್ತಾರೆ ಶಾರದಾಬಾಯಿವರು. ಶಾರದಾಬಾಯಿಯವರ ಮೇಲೆ ಅವರ ತಂದೆಯ ಪ್ರಭಾವ ವಿಶೇಷವಾಗಿ ಆಗಿದೆ. ಶಾರದಾ ಅವರು ಬಿ.ಎ. ಓದಲೂ ತಂದೆಯವರ ಪ್ರೋತ್ಸಾಹ ದೊರಕಿತು. ಇವರು ಪೂನಾದಲ್ಲಿ ಎಸ್.ಪಿ. ಕಾಲೇಜಿನಲ್ಲಿ ಓದಿ, 1932ರಲ್ಲಿ ಬಿ.ಎ. ಪದವೀಧರರಾದರು. ಇವರ ಮಾತೃಭಾಷೆ ಮರಾಠಿ.

ಇಂಗ್ಲಿಷ್, ಸಂಸ್ಕೃತಗಳನ್ನು ವಿದ್ಯಾರ್ಥಿಯಾದಾಗ ಚೆನ್ನಾಗಿ ಕಲಿತರು. ಮದುವೆ ಆದಮೇಲೆ ಕನ್ನಡ ಬಂದಿತು. ಹಿಂದಿ ಚೆನ್ನಾಗಿ ಬರುತ್ತಿತ್ತು. ಹೀಗೆ ಶ್ರೀಮತಿಯವರಿಗೆ ಪಂಚ ಭಾಷೆಗಳ ಪರಿಚಯವುಂಟು.

ಸಂಗೀತದ ಬಗ್ಗೆ ಒಲವು ಹೆಚ್ಚು. ತಾನೇ ಸ್ವತಃ ಹಾಡನ್ನು ಹಾಡದಿದ್ದರೂ ಕೇಳುವ ಆಸೆ ಹೆಚ್ಚಾಗಿದೆ. ಅದರಲ್ಲಿಯೂ ಲಘು ಸಂಗೀತ ಎಂದರೆ ಬಹಳ ಆಸೆ. ಸಂಪ್ರದಾಯದಿಂದ ನಡೆದು ಬಂದಿರುವ ಹಬ್ಬ ಹರಿದಿನಗಳಲ್ಲಿ ಹೆಚ್ಚಿನ ನಂಬಿಕೆ ಇದ್ದು ಅಚ್ಚುಕಟ್ಟಾಗಿ ನಡೆಸಿಕೊಂಡು ಬಂದಿದ್ದಾರೆ.

ಶಾರದಾ ಆದ್ಯರಿಗೆ 1934ರಲ್ಲಿ ಮದುವೆ ಆಯಿತು. ವಾಸುದೇವಾಚಾರ್ಯ, ಭಾವಾಚಾರ್ಯ ಅಗರ್‌ಖೇಡರು ಮಾವನವರಾದರೆ ರಮಾಬಾಯಿಯವರು ಅತ್ತೆಯಾದರು. ಆದ್ಯ ಎನ್ನುವುದು ಮನೆತನದ ಹೆಸರು. ಬಿಜಾಪುರ ಜಿಲ್ಲೆಯ ಅಗರ್‌ಖೇಡಾದ ಜಹಗೀರುದಾರರಾಗಿದ್ದರು ಮತ್ತು ಕನ್ನಡ ಶಾಲೆಯ ಮುಖ್ಯೋಪಾಧ್ಯಾಯರು ಇವರ ಮಾವನವರು.

### ಸಂಸಾರ ರಂಗ

ಶ್ರೀಮತಿ ಶಾರದಾಬಾಯಿಯವರಿಗೆ ಇಬ್ಬರು ಹೆಣ್ಣುಮಕ್ಕಳು, ಒಬ್ಬ ಮಗ. ಪ್ರೊ. ರಂಗಾಚಾರ್ಯರು ತಮಗೆ ಒಳ್ಳೆಯದೆಂದು ತೋರಿದ್ದನ್ನು ತಂದು ಶ್ರೀಮತಿಯವರಿಗೆ ಕೊಟ್ಟು ಓದಲು ಹೇಳುತ್ತಿದ್ದರಂತೆ. ಮಗ ಸ್ವಲ್ಪ ದೊಡ್ಡವನಾದ ಮೇಲೆ ಆತನೂ ಒಳ್ಳೆಯ ಪುಸ್ತಕಗಳನ್ನು ತಾಯಿಗೆ ತಂದುಕೊಡುತ್ತಿದ್ದನಂತೆ. "ನನಗೆ ಯಾವುದಾದರೂ ಪುಸ್ತಕ ಓದಬೇಕು ಎನಿಸುವ ಆಸೆ ಉಂಟಾಗಿದ್ದರೆ ಅದಕ್ಕೆ ನನ್ನ ಯಜಮಾನರು ಮತ್ತು ಮಗ ಕಾರಣ" ಎಂದು ಶಾರದಾ ಬಾಯಿಯವರು ಅತ್ಯಂತ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅವರ ಸಾಹಿತ್ಯಾಭಿರುಚಿಯೇ ಅವರಿಂದ ಈ ಕೆಲಸ ಮಾಡಿಸುತ್ತಿತ್ತೋ ಏನೋ! ಪ್ರೊಫೆಸರ್ ರಂಗಾಚಾರ್ಯರ ಬರವಣಿಗೆಯ ಯಾವ ಕೆಲಸಕ್ಕೂ ಶ್ರೀಮತಿಯವರು ಎಂದೂ ಆಕ್ಷೇಪಿಸಿದವರಲ್ಲ, ಅಡ್ಡಿಪಡಿಸಿದವರಲ್ಲ. ಮಕ್ಕಳು ತಂದೆತಾಯಿಯ ಕೆಲಸಕ್ಕೆ ನೆರವಾಗುತ್ತಿದ್ದರು. ಮಕ್ಕಳಿಗೆ ಯಾವ ವಿಷಯಕ್ಕೂ ಯಾವ ರೀತಿಯ ಅನಾನುಕೂಲವನ್ನೂ ಮಾಡಿದವರಲ್ಲ ಶ್ರೀರಂಗ ದಂಪತಿಗಳು. ಮಕ್ಕಳಿಗೂ ಓದುವ ಆಸಕ್ತಿ ಹೆಚ್ಚು. ಪ್ರೊಫೆಸರರ ಮನೆಯ ವಾತಾವರಣ ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ಅನುಕೂಲಕರವಾಗಿತ್ತು. ಮಗ ಎಂ.ಎಸ್ಸಿ ಓದಿ ಈಗ ಅಮೇರಿಕೆಯಲ್ಲಿ ಮುಂದಿನ ಅಧ್ಯಯನ ನಡೆಸುತ್ತಿದ್ದಾನೆ. ಒಬ್ಬ ಮಗಳು ಈಗ ಬಿ.ಎ, ಬಿ.ಎಲ್. ಮುಗಿಸಿದ್ದಾರೆ. ಇನ್ನೊಬ್ಬ ಮಗಳೂ ಎಂ.ಬಿ.ಬಿ.ಎಸ್, ಎಂ.ಡಿ ಮಾಡಿ ಮುಂಬಯಿಯಲ್ಲಿ ವೈದ್ಯಕೀಯ ವೃತ್ತಿಯಿಂದ ಜನಸೇವೆ ಸಲ್ಲಿಸುತ್ತಿದ್ದಾರೆ. ಇಬ್ಬರೂ ಹೆಣ್ಣು ಮಕ್ಕಳಿಗೂ ಮದುವೆ ಆಗಿದೆ. ಅಳಿಯಂದಿರಿಬ್ಬರೂ ಎಂ.ಡಿ. ಮಾಡಿಕೊಂಡು ವೈದ್ಯರಾಗಿದ್ದಾರೆ. ವಿದ್ಯಾವಂತ ತಂದೆತಾಯಿಗಳಾದ ಶ್ರೀರಂಗ, ಶಾರದಾಬಾಯಿಯವರು ಮಕ್ಕಳು ಬಯಸಿದಷ್ಟು ವಿದ್ಯೆಯನ್ನು ಕಲಿಯುವಂತೆಯೂ ಮಾಡಿ ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳನ್ನಾಗಿ ಮಾಡಿದ್ದಾರೆ.

### ಎಂಥ ಸಂದರ್ಭದಲ್ಲಿಯೂ

ತಮ್ಮ ಯಜಮಾನರ ಕೆಲವು ನಾಟಕಗಳನ್ನು ಶಾರದಾಬಾಯಿಯವರು ಓದಿದ್ದಾರೆ. ವಿಶೇಷವಾಗಿ ಎಲ್ಲ ನಾಟಕಗಳ ಅಭಿನಯವನ್ನೂ ನೋಡಿದ್ದಾರೆ. ಅನೇಕ ನಾಟಕಗಳ

ಅಭ್ಯಾಸ (Rehearsal) ಇವರ ಮನೆಯಲ್ಲಿಯೇ ನಡೆದು, ಅವುಗಳ ಆಳವಾದ ಪರಿಚಯ ಆಗಿದೆ ಶಾರದಾಬಾಯಿಯವರಿಗೆ. ಆದರೂ ಅವರಿಗೆ ಪತಿಯ ಏಕಾಂಕ ನಾಟಕಗಳ ಬಗೆಗೆ ಒಲವು ಹೆಚ್ಚು. ಶ್ರೀಮತಿಯವರು ಬಿ.ಎ. ಕಲಿತಿದ್ದರೂ ಹೊರಗೆ ಕೆಲಸ ಮಾಡಿ ಹಣ ಸಂಪಾದಿಸಬೇಕು ಎನ್ನಿಸಲಿಲ್ಲ. ಅದಕ್ಕೆ ಬದಲಾಗಿ ಮನೆಯಲ್ಲಿಯೇ ಇದ್ದು ಅಚ್ಚುಕಟ್ಟಾಗಿ ಸಂಸಾರ ನಡೆಸಿದ್ದಾರೆ. ಒಳ್ಳೆಯ ಗೃಹಿಣಿ ಎನಿಸಿಕೊಂಡಿದ್ದಾರೆ. ಸಂಸಾರದ ಬಗ್ಗೆ ಬಹಳ ಆಸಕ್ತಿ ಹಾಗೂ ಒಲವು ಅಡಿಗೆಯಿಂದ ಹಿಡಿದು ಕುಶಲಕಲೆಗಳವರೆಗೂ ಯಾವ ಕೆಲಸವನ್ನು ಮಾಡಿದರೂ ಬಹಳ ಅಚ್ಚುಕಟ್ಟಾಗಿ ಜಾಣ್ಮೆಯಿಂದ ಮಾಡುವ ಅಭ್ಯಾಸವಿದೆ. ಚೆನ್ನಾಗಿರುವ ಯಾವ ವಿಷಯಕ್ಕೂ ಅವರ ಗಮನ ತಕ್ಷಣ ಹರಿಯುತ್ತದೆ. ಅದನ್ನು ಅತ್ಯಂತ ಎಚ್ಚರಿಕೆ ವಹಿಸಿ ತನ್ನದನ್ನಾಗಿ ಮಾಡಿಕೊಳ್ಳುವ ಬುದ್ಧಿವಂತಿಕೆ ಶ್ರೀಮತಿ ಶಾರದಾರವರಿಗೆ ದೈವದತ್ತ ವರ.

ಪ್ರೊಫೆಸರ್ ರಂಗಾಚಾರ್ಯರ ಪಾಂಡಿತ್ಯಕ್ಕೆ ಪ್ರೊಫೆಸರರ ಕೆಲಸ ಒಂದು ನೆಪಮಾತ್ರ. ಆ ಹುದ್ದೆಗೆ ಅವರು ರಾಜೀನಾಮೆ ಕೊಟ್ಟಾಗಲೂ ಅದರಿಂದ ಶ್ರೀರಂಗರ ಗೌರವಕ್ಕೇನೂ ಚ್ಯುತಿ ಉಂಟಾಗಲಿಲ್ಲ. ಅಧಿಕಾರದಲ್ಲಿ ಇದ್ದಾಗ ಅವರನ್ನು ಜನತೆ ಎಷ್ಟು ಮರ್ಯಾದೆಯಿಂದ ಕಾಣುತ್ತಿದ್ದರೋ ಅಷ್ಟೇ ಮರ್ಯಾದೆಯಿಂದ ಅವರು ಕೆಲಸಕ್ಕೆ ರಾಜೀನಾಮೆ ಕೊಟ್ಟಾಗಲೂ ಕಾಣುತ್ತಿದ್ದರು. ಇದಕ್ಕೆ ಕಾರಣ ತಮ್ಮ ವಿದ್ವತ್ತಿನಿಂದ ಜನತೆಯ ಹೃದಯವನ್ನು ಗೆದ್ದಿದ್ದರು ಶ್ರೀರಂಗರು. ಇದೆಲ್ಲವನ್ನೂ ತಿಳಿದಿದ್ದ ಶಾರದಾಬಾಯಿಯವರು ಬಹಳ ಆನಂದದಿಂದಲೇ ಸುಖಕರವಾಗಿ ಸಂಸಾರವನ್ನು ತೂಗಿಸಿಕೊಂಡು ಬಂದಿದ್ದಾರೆ.

**ಪ್ರಶ್ನೆಗುತ್ತರ**

ಸಾಹಿತಿಯ ಮನೆಗೆ ಸಾಹಿತಿಗಳು ಅನೇಕರು ಬರುತ್ತಿದ್ದು, ಶ್ರೀಮತಿ ಶಾರದಾಬಾಯಿಯವರ ಆದರೋಪಚಾರಕ್ಕೆ ಒಳಗಾಗಿದ್ದಾರೆ. ಸಾಲಿ ರಾಮಚಂದ್ರರಾಯರು ಶ್ರೀಮತಿಯವರಿಗೆ ಕನ್ನಡ ಕಲಿಸಿಕೊಟ್ಟ ಗುರು. ಕಾರಂತರು, ಅವರ ಪತ್ನಿ ಒಡಗೂಡಿ ಬಂದು ಇವರ ಮನೆಯಲ್ಲಿಯೇ ತಂಗುತ್ತಿದ್ದುದುಂಟು. ವಿ. ಸೀತಾರಾಮಯ್ಯನವರು, ಡಾ. ಶಿವರಾಂ (ರಾ.ಶಿ.) ಅವರುಗಳ ಪರಿಚಯ ವಿಶೇಷವಾಗಿದೆ. ಶ್ರೀರಂಗರ ಬಗ್ಗೆ ಶ್ರೀಮತಿಯವರಿಗೆ ವಿಶೇಷ ನಿಕೆ. ಶ್ರೀರಂಗರು ಪ್ರೊಫೆಸರ್ ಕೆಲಸಕ್ಕೆ ರಾಜೀನಾಮೆ ಕೊಟ್ಟಾಗ ಖಚಿತವಾಗಿ ಯಾವ ಕೆಲಸವನ್ನು ಅವರು ಕೈಗೊಳ್ಳದೆ ಇದ್ದಾಗಲೂ "ಹೆಂಡತಿ ಮಕ್ಕಳನ್ನು ಕೈ ಬಿಡುವುದಿಲ್ಲ, ಹೇಗಾದರೂ ಚೆನ್ನಾಗಿಯೇ ಸಾಕುತ್ತಾರೆ" ಎನ್ನುವ ನಂಬಿಕೆ. "ದೇವರಿದ್ದಾನೆ ಹೇಗೋ ಕಾಪಾಡ್ತಾನೆ" ಎನ್ನುವ ಭರವಸೆ. ಇವುಗಳು ಶ್ರೀಮತಿಯವರಿಗೆ ಸಂಸಾರದಲ್ಲಿ ಯಾವ ಬಗೆಯ ಅತೃಪ್ತಿಯನ್ನೂ ಉಂಟುಮಾಡಲಿಲ್ಲ. ಪ್ರೊಫೆಸರರು ಅವರನ್ನು ಹಾಗೆ ನೋಡಿಕೊಂಡು ಬಂದಿದ್ದಾರೆ.

ಶ್ರೀರಂಗರ ಅನೇಕ ಗೆಳೆಯರು ಶ್ರೀರಂಗರ ಮದುವೆಗೆ ಮೊದಲು "ನೀನು ಮದುವೆ ಆದರೆ ಹೆಂಡತಿ ಮಕ್ಕಳನ್ನು ಹೇಗೆ ಸಾಕುವೆ?" ಎನ್ನುತ್ತಿದ್ದರಂತೆ. ಮೊನ್ನೆ ಇತ್ತೀಚೆಗೆ ಶ್ರೀರಂಗರಿಗೆ ಮೊಮ್ಮಕ್ಕಳಾದ ಮೇಲೆ ಮಗಳನ್ನು, ಮೊಮ್ಮಗಳನ್ನು ಊರಿಗೆ ಕಳುಹಿಸಿದ ಮೇಲೆ ಶ್ರೀರಂಗರು ತಮ್ಮ ಗೆಳೆಯರೊಡನೆ "ನನ್ನ ಮೊಮ್ಮಗಳು ಊರಿಗೆ ಹೋದಳು" ಎಂದಾಗ ಅವರು "ನೀನು ಸಂಸಾರಕ್ಕೆ ಅಂಟಿಕೊಂಡಿರುವೆಯಾ?" ಎಂದು ನಗುತ್ತಾ ಕೇಳಿದರಂತೆ. ಹೊರಗಿನ ನೋಟಕ್ಕೆ ಕಾಣುವ ಶ್ರೀರಂಗರೇ ಬೇರೆ, ಸಂಸಾರಿ ಶ್ರೀರಂಗರೇ ಬೇರೆ. ಮನೆಯಲ್ಲಿ ಒಳ್ಳೆಯ ಪತಿಯಾಗಿ, ಉತ್ತಮ ತಂದೆಯಾಗಿ, ಶ್ರೇಷ್ಠ ತಾತ ಆಗಿದ್ದಾರೆ.

ಒಮ್ಮೆ ಬಹಳ ವರ್ಷಗಳ ಹಿಂದೆ ಶ್ರೀರಂಗರನ್ನು ಕಾಣಲು ಕೆಲವರು ಅತ್ಯಂತ ಭಯಭಕ್ತಿಯಿಂದ ಬಂದಿದ್ದರಂತೆ. ಆಗ ಇನ್ನೂ ಸಣ್ಣ ಮಗುವಾಗಿದ್ದ ತಮ್ಮ ಮಗುವನ್ನು ತಮ್ಮ ತೊಡೆಯ ಮೇಲೆ ಮಲಗಿಸಿಕೊಂಡೇ ಮಾತನಾಡುತ್ತ ಕುಳಿತರಂತೆ ಶ್ರೀರಂಗರು. ಆಗ ಬಂದಿದ್ದವರು "ನಿಮಗೆ ತೊಂದರೆ ಆಗದಿದ್ದರೆ ಮಗುವನ್ನು ಒಳಗೆ ಮಲಗಿಸಿರಿ" ಎಂದಾಗ ಶ್ರೀರಂಗರು ನಗುತ್ತಾ ಉತ್ತರಿಸಿದರಂತೆ "ಇದು ನನ್ನ ಮನೆ, ಇದು ನನ್ನ ಮಗು, ಇದು ಹೀಗೆ ನನ್ನ ತೊಡೆಯ ಮೇಲೆ ಮಲಗಿರಲು ನನಗೆ ಇಷ್ಟ" ಎಂದು. ಸಂಸಾರಕ್ಕೆ ಅಂಟಿಯೂ ಅಂಟದಂತಿರುವ ಮಹನೀಯರು ಕೆಲವರು ನಮಗೆ ಸಿಗಬಹುದು. ಆದರೆ, ಸಂಸಾರಕ್ಕೆ ಅಂಟದಂತಿದ್ದು ಅಂಟಿರುವ ಮಹನೀಯರು ನಮಗೆ ಸಿಗುವುದು ಶ್ರೀರಂಗರೊಬ್ಬರೇ. ಮೊಮಕ್ಕಳು ಮನೆಯಲ್ಲಿ ಇದ್ದರೆ ಅವರು ಮನೆಬಿಟ್ಟು ಹೊರಡುವುದೇ ಕಷ್ಟ. ಮೊಮ್ಮಕ್ಕಳು ಅವರಿಗೆ ಸರಿಯಾದ ಜೋಡಿ. ಅವರ ಆಟಪಾಟಗಳಲ್ಲಿ ದಿವಸ ಕಳೆಯುವುದೇ ಶ್ರೀರಂಗರಿಗೆ ತಿಳಿಯುವುದೇ ಇಲ್ಲ. ಶ್ರೀರಂಗರನ್ನು ಈ ಮಮತೆಯ ಬಂಧನಕ್ಕೆ ಸಿಕ್ಕಿಸಿರುವವರು ಶ್ರೀಮತಿ ಶಾರದಾಬಾಯಿಯವರೇ. ಅವರ ವಾತ್ಸಲ್ಯದೀವಿಗೆಯ ಬೆಳಕಿನಲ್ಲಿ ಶ್ರೀರಂಗರು ಹೆಚ್ಚು ಶೋಭಾಯಮಾನವಾಗಿ ಶೋಭಿಸುತ್ತಾರೆ. ಇಂಥ ಆದರ್ಶ ಪತ್ನಿಯನ್ನು ಪಡೆದಿರುವ ಶ್ರೀರಂಗರು ತಮ್ಮ ವೈವಾಹಿಕ ಜೀವನದ ಇಪ್ಪತ್ತೈದು ವರುಷಗಳ ಸವಿನೆನಪಿಗಾಗಿ ತಮ್ಮ ಗೃಹಲಕ್ಷ್ಮಿಗೆ 'ಕತ್ತಲೆ-ಬೆಳಕು' ಎನ್ನುವ ನಾಟಕವನ್ನು ಪ್ರೀತಿಯಿಂದ ಅರ್ಪಿಸಿ ತಮ್ಮ ಕೃತಜ್ಞತೆಯನ್ನು ಸೂಚಿಸಿದ್ದರು.

**ಕೃಪೆ : ಆ ಮುಖ, ಪ್ರೊ. ನಾಡೋಜ ಕಮಲಾ ಹಂಪನಾ**

---

# ನೆನೆದಾಗ ನೂರು ಬಣ್ಣ

ಹಜಾರೋಕಾ ಅಣ್ಣಾ
ಅಣ್ಣಾ ಹಜಾರೆ
ಪ್ರೀತಿಯ ಅಣ್ಣಾ
ಅಣ್ಣಾ ಹಜಾರೆ
ಮಹಾನ್ ಚೇತನ ಅಣ್ಣಾ
ಕೋಟಿ ಕೋಟಿ ಜನರ
ಕಣ್ಣು ತೆರೆಸಿದ ಅಣ್ಣಾ
ಸ್ವಾರ್ಥ ಸುಖವ ಮರೆತು
ದೇಶಕ್ಕಾಗಿ ಜೀವ
ಮುಡಿಪಾಗಿಸಿದ ಅಣ್ಣಾ
ನಿಮಗಿದೋ ನನ್ನ ನಮನ||

ಸ್ವಾರ್ಥ ತುಂಬಿದ ಜನರಿಗೆ
ನಿಸ್ವಾರ್ಥದರ್ಥ ಕಲಿಸಿದರಣ್ಣಾ
ನಿಷ್ಕಲ್ಮಶ ಪ್ರೀತಿ ಅರುಹಿದಣ್ಣಾ
ಪಾಪಿಜನರ ಉದ್ಧಾರಕ್ಕಾಗಿ
ತಾವು ಮಾಡಿದ ದೇಹದಂಡನೆ
ನಮ್ಮ ಕಣ್ಣು ತರೆಸಿತು ಅಣ್ಣಾ
ಕುಂದಿದ ನಿಮ್ಮ ಮುಖ
ಕಂದಿದ ಆ ಕಣ್ನೋಟ
ನಡೆಯಲಾರದ ದೀನ ಸ್ಥಿತಿ
ಕಣ್ಣಲ್ಲಿ ಸುರಿಸಿತು ಅಶ್ರುಧಾರೆ||

ಅನ್ನುತಿದೆ ಮನಸ್ಸು
ಬದುಕಬೇಕೆಂದು ನಿಮ್ಮಂತೆ
ನಿರಾಡಂಬರ, ನಿಗರ್ವಿ
ಸೊಗಡು ತೋರಬೇಕೆಂದು
ಅಣ್ಣಾ ಅಣ್ಣಾ ನಿಮ್ಮ ನೆನೆದಾಗಲೆಲ್ಲಾ
ಮನದಲ್ಲಿ ಹುಟ್ಟುತ್ತದೆ ನೂರಾರು ಬಣ್ಣ||

**– ಶಾರದಾ ಎ. ಅಂಚನ್**

# ಜನರ ಜೀವನವನ್ನೇ ಬದಲಾಯಿಸಿದ ಜಾಹೀರಾತುಗಳು

ನನ್ನ ಜೀವನದಲ್ಲಿಯ ಅವಿಸ್ಮರಣೀಯ ದಿನಗಳನ್ನು ಮೆಲಕುಹಾಕುತ್ತಿರುವೆ. ಆ ದಿನಗಳಲ್ಲಿ ನಾನು ನಾನು ಬೋಧಿಸುತ್ತಿರುವ ಕಾಲೇಜಿನಲ್ಲಿ ಪ್ರಾಂಶುಪಾಲನಾಗಿ ನಿಯುಕ್ತನಾಗಿದ್ದೆ. ಕನ್ನಡ ವಿದ್ಯಾರ್ಥಿಗಳಿಗೆಲ್ಲ ವಿಶೇಷ ಅಭಿಮಾನ. ನನ್ನ ಒಬ್ಬ ನಚ್ಚಿನ ವಿದ್ಯಾರ್ಥಿ, ಬಿ.ಕಾಂ. ಹಾಗೂ ಎಂ.ಕಾಂ. ಪದವಿಗಳಲ್ಲಿ ಪ್ರಥಮ ದರ್ಜೆ ಪಡೆದು ಪಾಸಾಗಿ, ನಮ್ಮಲ್ಲೇ ಪ್ರಧ್ಯಾಪಕನಾಗಿದ್ದ. ಅವನು ಒಳ್ಳೆಯ ಪಾಧ್ಯಾಪಕನೆಂದು ಕಾಲೇಜಿನಲ್ಲಿ ಹೆಸರು ಮಾಡಿದ್ದ. ಅವನ ಮದುವೆ ಬೋರಿವಲಿ ಚರ್ಚನಲ್ಲಿ ನಡೆದಾಗ ನಾನೊಬ್ಬ ವಿಶೇಷ ಆತ್ಮೀಯ ಗೌರವಾನ್ವಿತ ಅತಿಥಿಯಾಗಿದ್ದೆ. ಒಮ್ಮೆ ಯವುದೋ ಕೆಲಸಕ್ಕೆ ನನ್ನ ಚೇಂಬರ್‌ಗೆ ಅವನು ಬಂದಿದ್ದ. ನಾನು ಅವನನ್ನು ಕೇಳಿದೆ, "ರಿಬೆಲ್ಲೋ, ನೀನು ಬಹಳ ವಿದ್ಯಾರ್ಥಿಪ್ರಿಯ ಪ್ರಾಧ್ಯಾಪಕರಲ್ಲಿ ಒಬ್ಬವ ಎಂದು ಕೇಳಿರುವೆ. ನಿನ್ನ ಒಂದು ಲೆಕ್ಚರ್ ಕೇಳಲು ನಿನ್ನ ಕ್ಲಾಸ್‌ರೂಮಿಗೆ ಬಂದು ಕುಳಿತುಕೊಳ್ಳುವ ಆಸೆಯಾಗಿದೆ. ನಾನು ಬರಬಹುದೇ?"ಎಂದು. ಅವನೆಂದ, "ಸರ್, ತಾವು ನನ್ನ ಲೆಕ್ಚರ್‌ಗೆ ಬಂದು ಕುಳಿತರೆ ಅದು ನನ್ನ ಭಾಗ್ಯ ಎಂದು ಭಾವಿಸುವೆ. ಆದರೆ ಅದಕ್ಕೊಂದು ಕಂಡಿಶನ್ ಇದೆ." ಅದೇನು ಎಂದು ಕೇಳಿದೆ. "ನನ್ನ ಒಂದು ಕ್ಲಾಸ್ ನೀವು ತೆಗೆದುಕೊಳ್ಳಬೇಕು. ನಾನು ವಿದ್ಯಾರ್ಥಿಗಳೊಂದಿಗೆ ಕುಳಿತು ಕೇಳುವೆ. ನಂತರ ನನ್ನ ಯಾವುದೇ ಕ್ಲಾಸ್ ನೀವು ಅಟೆಂಡ್ ಮಾಡಬಹುದು." ಎಂದನು. "ನಿನ್ನ ಬಿ.ಕಾಂ.ವಿದ್ಯಾಥಿಗಳಿಗೆ ನಾನು ಯಾವ ವಿಷಯ ಪಾಠ ಮಾಡಲಿ?" ಎಂದು ಕೇಳಿದೆ. "ನಮ್ಮ ವಿದ್ಯಾರ್ಥಿಗಳಿಗೆ 'ಎಡ್‌ವರ್ಟೈಸ್‌ಮೆಂಟ್' ಎಂಬ ಒಂದು ಪೇಪರ್ ಇದೆ. ತಾವು ಅದರ ಮಹತ್ವದ ಬಗ್ಗೆ ಮಾತಾಡಬಹುದು" ಎಂದನು. ನಾನು ಅವನ ಆಹ್ವಾನವನ್ನು ಸ್ವೀಕರಿಸಿದೆ.

ಗೊತ್ತುಪಡಿಸಿದ ದಿನ ನಾನು ಪ್ರೊ. ರಿಬೆಲ್ಲೋನ ಕ್ಲಾಸ್‌ರೂಮ್ ಪ್ರವೇಶಿಸಿದೆ. ನನ್ನ ಪರಿಚಯ ಮಾಡುತ್ತ ಅವನು ಹೇಳಿದ, " ಸರ್ ನಮ್ಮ ಕಾಲೇಜಿನ ಪ್ರಿನ್ಸಿಪಾಲರೆಂದು ನಿಮಗೆ ಗೊತ್ತಿದೆ, ಆದರೆ ಅವರು ನನ್ನ ನಚ್ಚಿನ ಕನ್ನಡ ಪ್ರೊಫೆಸರ್ ಆಗಿದ್ದರು ಎಂಬ ವಿಷಯ ನಿಮಗೆ ಗೊತ್ತಿಲ್ಲ. ಇಂದು ಅವರು ಅತಿಥಿ ಉಪನ್ಯಾಸ ನೀಡಲು ಬಂದಿದ್ದಾರೆ. ಅವರ ಬದಿಯಲ್ಲಿರುವ ಕುರ್ಸಿಯಲ್ಲಿ ನಾನು ಕೂಡುವುದಿಲ್ಲ. ವಿದ್ಯಾರ್ಥಿಗಳೊಂದಿಗೆ ಕುಳಿತು ಮತ್ತೆ ವಿದ್ಯಾರ್ಥಿಯಾಗಿ ಅವರ ಉಪನ್ಯಾಸ ಕೇಳುವೆ." ಎಂದವನೇ ಮುಂದಿನ ಡೆಸ್ಕ್ ಅಲಂಕರಿಸಿದ.

ನಾನು ಅರ್ಧ ಗಂಟೆ ಜಾಹೀರಾತಿನ ಅವಶ್ಯಕತೆ, ಅದರ ಮಹತ್ವದ ಬಗ್ಗೆ ಮಾತಾಡಿದೆ. ನಂತರ ನಾನು ಕೈಯಲ್ಲಿ ಹಿಡಿದ ಒಂದು ಪುಸ್ತಕವನ್ನು ತೋರಿಸುತ್ತ ಹೀಗೆ ಹೇಳಿದೆ:

"ನೀವು ಪ್ರಸಿದ್ಧ ಅಮೇರಿಕನ್ ಕಾದಂಬರಿಕಾರ ಇರ್ವಿಂಗ್ ವ್ಯಾಲೇಸ್‌ನ ಹೆಸರು ಕೇಳಿರ ಬೇಕು. ಅವರು ತಮ್ಮ ಮನೆಯ ಸದಸ್ಯರ, ಅಂದರೆ– ಮಗ, ಹೆಂಡತಿ, ಮಗಳ (ಡೆವಿಡ್, ಅಮಿ, ಸಿಲ್ವಿಯಾ) ಸಹಕಾರದಿಂದ 'ದಿ ಬುಕ್ ಆಫ್ ಲಿಸ್ಟ್ಸ್' ಎಂಬ ಮೂರು ಸಂಪುಟಗಳ ಗ್ರಂಥವನ್ನು ಸಂಪಾದಿಸಿದ್ದಾರೆ. ಈ ಸಂಪುಟಗಳಲ್ಲಿ ಜ್ಞಾನವಿದೆ, ವಿಜ್ಞಾನವಿದೆ, ಮನರಂಜನೆ ಇದೆ. ಬ್ಯಾಬಿಲೋನದ ರಾಜ ಹಮೂರಾಬಿಯು (ಕ್ರಿ.ಪೂ.1750) 282 ಕಾಯಿದೆಗಳ 'ಲಿಸ್ಟ್' ಪ್ರಕಟಿಸಿದ್ದ. ಅಂದಿನಿಂದ ಆಧುನಿಕ ಕಾಲದ ವರೆಗೆ ವಿವಿಧ ಕ್ಷೇತಗಳ ದಾಖಲೆಗಳನ್ನು ಪಟ್ಟಿಮಾಡಿದ್ದಾರೆ. ಈ ಬೃಹತ್ ಕೆಲಸಕ್ಕೆ ಸಹಾಯ ಮಾಡಲು 150 ಲೇಖಕರ ತಂಡವೇ ಇವರೊಂದಿಗೆ ದುಡಿದಿದೆ. ಜಾಹೀರಾತು ನೀಡಿ ಸಾಮಾನ್ಯ ಜನರಿಂದ ಕೂಡ ಮಾಹಿತಿ ಸಂಗ್ರಹಿಸಿದ್ದಾರೆ, ಪ್ರಕಟವಾದ ಮಾಹಿತಿ ಕಳಿಸಿದವರಿಗೆ ಸಂಭಾವನೆಯನ್ನೂ ನೀಡಿದ್ದಾರೆ. ಮೊದಲನೆಯ ಸಂಪುಟ 1977ರಲ್ಲಿ ಪ್ರಕಟವಾಯಿತು. ಕೂಡಲೇ ಹಲವಾರು ಆವೃತ್ತಿ ಪಡೆಯಿತು. 18 ದಶಲಕ್ಷ ಪ್ರತಿಗಳು 23 ದೇಶಗಳಲ್ಲಿ ಫಿನ್‌ಲ್ಯಾಂಡ್, ಫ್ರಾನ್ಸ್, ಜಪಾನ್ ಮತ್ತು ಭಾರತ ಕೂಡ) ಖರ್ಚಾದವು. ಹಲವಾರು ಪತ್ರಿಕೆಗಳು ಇದರ ವಿಷಯ ಧಾರಾವಾಹಿಯಾಗಿ ಪ್ರಕಟಿಸಿದವು.

ಎರಡನೆಯ ಸಂಪುಟದಲ್ಲಿ, "ಜನರ ಜೀವನವನ್ನೇ ಬದಲಿಸಿದ ಎಂಟು ಜಾಹೀರಾತುಗಳು" ಎಂಬ ಶೀರ್ಷಿಕೆಯ ಅಡಿಯಲ್ಲಿ ಕುತೂಹಲಕಾರಿ ಜಾಹೀರಾತುಗಳ 'ಲಿಸ್ಟ್' ಪ್ರಕಟವಾಗಿದೆ. ಜಾಹೀರಾತು ಪಾಠಮಾಡುವ ಬಹಳ ಜನ ಪ್ರಾಧ್ಯಾಪಕರಿಗೆ ಈ ವಿಷಯ ಹೊಸತು. ನಾನು ಮೆಚ್ಚಿದ ಒಂದು ಜಾಹೀರಾತಿನ ಬಗ್ಗೆ ನಾನು ಈಗ ಹೇಳಲಿರುವೆ.

2 ಮೇ, 1962ರಂದು, ಸ್ಯಾನ್ ಫ್ರಾನ್ಸಿಸ್ಕೋದ 'ಎಗ್ಸಾಮಿನರ್' ಎಂಬ ಪತ್ರಿಕೆಯಲ್ಲಿ ಒಂದು ನಾಟಕೀಯ ಎನ್ನಬಹುದಾದಂತಹ ಜಾಹೀರಾತು ಪ್ರಕಟವಾಗಿತ್ತು. ಅದರ ಹೆಡಲೈನ್ ಹೀಗಿತ್ತು, "ನನ್ನ ಗಂಡ ತಾನು ಮಾಡದೇ ಇದ್ದ ಅಪರಾಧಕ್ಕಾಗಿ ಫಾಶಿ ಶಿಕ್ಷೆ ಅನುಭವಿಸಿ ಸಾಯಬೇಕಿಲ್ಲ."

ಡಾ। 'ಜೀವಿ' ಕುಲಕರ್ಣಿ
(JEEVI65@GMAIL.COM)

ನನ್ನ ಗಂಡ ಈಗ ಜೇಲಿನಲ್ಲಿದ್ದಾನೆ. ಅವನ ಮೇಲೆ ಕೊಲೆಯ ಆರೋಪವಿದೆ. ಅವನ ಪರವಾಗಿ ವಾದಿಸಿ ಅವನ ಜೀವ ಉಳಿಸಲು ಹಿರಿಯ ವಕೀಲರ ಗಮನಕ್ಕೆ ಈ ಜಾಹೀರಾತು ಇದೆ. ಹಿರಿಯ, ಉದಾರ ಮನಸ್ಸಿನ ವಕೀಲರು ನನ್ನನ್ನು ಸಂಪರ್ಕಿಸಿ, ನನ್ನ ಗಂಡನ ಪರವಾಗಿ ವಾದಿಸಿ, ಅವನ ಜೀವ ಉಳಿಸಿಕೊಟ್ಟರೆ, ನಾನು ಆ ವಕೀಲರ ಸೇವಕಿಯಾಗಿ ಅವರ ಮನೆಯಲ್ಲಿ ಸಂಬಳವಿಲ್ಲದೆ ಹತ್ತು ವರ್ಷ ಕಾಲ ದುಡಿಯಲು ಸಿದ್ಧಳಿದ್ದೇನೆ. ಕಸಗೂಡಿಸುವದು, ಬಟ್ಟೆ ಒಗೆಯುವುದು, ಅಡುಗೆ ಮಾಡುವದು, ಮಕ್ಕಳನ್ನು ಪಾಲಿಸುವುದು – ಯಾವುದೇ ಕೆಲಸಕ್ಕೂ ನಾನು ಸಿದ್ಧ. ಅವರ ಮನೆಯ ಎಲ್ಲ ಕೆಲಸ ಮಾಡಿ ಋಣಮುಕ್ತಳಾಗುವೆ." ಕೆಳಗೆ ಮಹಿಳೆಯ ಹೆಸರು (ಗ್ಲ್ಯಾಡಿ ಕಿಡ್), ವಿಳಾಸ, ದೂರಧ್ವನಿ ಪ್ರಕಟವಾಗಿತ್ತು.

ನಾನಿ ಪಾಲಖಿವಾಲಾನಂಥಹ ವರಿಷ್ಠ ನ್ಯಾಯವಾದಿಯೊಬ್ಬ ಸ್ಯಾನ್ ಫ್ರಾನ್ಸಿಸ್ಕೋದಲ್ಲಿದ್ದ. ಅವನ ಹೆಸರು ವಿನ್ಸೆಂಟ್ ಹಲಿನನ್. ಅವನ ಹೆಂಡತಿ ಈ ಜಾಹೀರಾತು ಓದಿ ಗಂಡನ ಗಮನ ಇದರೆಡೆ ಹರಿಸಿದಳು. ಅವನು ಗ್ಲ್ಯಾಡಿ ಕಿಡ್ ಅವಳನ್ನು ಸಂಪರ್ಕಿಸಿ ತನ್ನ ಆಫೀಸಿಗೆ ಕರೆಸಿದ. ಅವಳ ಕಥೆ ಕೇಳಿದ. ಅದು ಹೀಗಿತ್ತು. ಅವಳ ಗಂಡ ರಾಬರ್ಟ ಲೀ ಕಿಡ್ ಎಂಬಾತ ಒಂದು 'ಪುರಾತನ ವಸ್ತು ವ್ಯಾಪಾರಿ' (ಎಂಟಿಕ್ ಡೀಲರ್) ಬಳಿ ಕೆಲಸಕ್ಕಿದ್ದ. ಒಮ್ಮೆ ಅವನು ವಿರಾಮದ ವೇಳೆಯಲ್ಲಿ ತನ್ನ ಸಹೋದ್ಯೋಗಿಯೊಂದಿಗೆ ಅಂಗಡಿಯಲ್ಲಿದ್ದ ಸುಂದರ ಕೆತ್ತನೆಯಿದ್ದ ಪುರಾತನ ಖಡ್ಗವೊಂದನ್ನು ತಿರುವುತ್ತ 'ಅಣಕು ಯುದ್ಧ' ಮಾಡಿ ಮನರಂಜನೆ ನೀಡಿದ್ದ. ಮುಂದೆ ಕೆಲದಿನಗಳ ನಂತರ ಅವರ ಮಾಲೀಕನ

*(ಪುಟ 8ಕ್ಕೆ)*

# ನಾ ಕಂಡ ಶ್ರೀಮತಿ ಗೀತಾ ವಿಶ್ವನಾಥ್

ಮೈಸೂರು ಅಸೋಸಿಯೇಷನ್ ಅನೇಕ ಕಲಾವಿದರನ್ನು 1926 ರಿಂದ ಹೊಂದಿದ ಸಂಸ್ಥೆ. ಎಲ್ಲಾ ಕಲಾವಿದರೂ ಕೂಡ ನಿಷ್ಠೆಯಿಂದ, ಕಲೆಯ ಹಾಗೂ ಅಸೋಸಿಯೇಷನ್ನಿನ ಸೇವೆ ಮಾಡಿದರು. ಶ್ರೀ ಗಂಗಾಧರಯ್ಯನವರಿಂದ ಇಂದಿನ ಪೃಥ್ವಿ ಹಾಗೂ ಭುವನವರೆಗೆ, ಕಳೆದ 89 ವರ್ಷದಲ್ಲಿ ಐದು ತಲೆಮಾರಿನ ಕಲಾವಿದರು ದುಡಿದಿದ್ದಾರೆ.

ಕಲಾವಿದರು ಕಲಾಕಾರರಷ್ಟೆ ಅಲ್ಲ, ಒಳ್ಳೆಯ ವ್ಯಕ್ತಿಗಳೂ ಆದಾಗ, ಆಗ ಕಲೆಯೇ ನಾಣ್ಯೆಯಾಗುತ್ತದೆ. ಅಂತಹ, ನಾನು ಮೆಚ್ಚಿದ ಕೆಲವೇ ವ್ಯಕ್ತಿಗಳಲ್ಲಿ ಶ್ರೀಮತಿ ಗೀತಾ ವಿಶ್ವನಾಥ್ ಒಬ್ಬರು.

**ವ್ಯಕ್ತಿ:** ಗೀತಾ ಅವರ ತಂದೆ-ತಾಯಿ ಹೆಸರಿಟ್ಟ ಹಾಗೆ ಒಂದು ಹಾಡಾಗಿದ್ದರು. ಯಾವಾಗಲೂ ನಗುಮುಖ. ಮಾತಾಡುವುದರಲ್ಲಿ ಮೈಸೂರಿನ ಜನ ಚೊಕ್ಕ ಎನ್ನುವುದುಂಟು. ಆದರೆ ಮೈಸೂರಿನವರಲ್ಲಿಯೇ ಗೀತಾ ಮಾತನಾಡುವುದು ಅತಿ ಚೊಕ್ಕ. ಮೆಲುದನಿ. ಯಾವಾಗಲೂ ಕಿರುಚಿ ಎತ್ತರ ಸ್ವರದಲ್ಲಿ ಮಾತನಾಡಿದ್ದನ್ನು ಯಾರೂ ನೋಡಲಿಲ್ಲ. ಯಾವುದರ ಬಗ್ಗೆಯಾದರೂ ಬೇಸರವಿದ್ದಲ್ಲಿ, ಮಾತು ನಿಲ್ಲಿಸಿಬಿಡುವುದಷ್ಟೇ ಸೂಚನೆ. ಯಾರ ಬಗ್ಗೆಯಾದರೂ ದೂರಿಲ್ಲ. ಬೇರೆ ಯಾರಾದರೂ ದೂರಿದರೆ, "ಒಬ್ಬೊಬ್ಬರು ಒಂದು ತರಹ ಇರ್ತಾರಲ್ವಾ" ಎನ್ನುವುದಷ್ಟೇ. ಹಾಡು ಹೇಳುವಾಗ ಮೆಲುದನಿಯಲ್ಲೇ ಇಂಪಾಗಿ ಹೇಳಬೇಕು. "ಧ್ವನಿ ಎತ್ತರಿಸಬೇಡ ತಾಯಿ" ಎಂದರೆ ಆಯಿತು, ಆ ಕಲಾವಿದೆಗೆ ನೀನು ಕಿರುಚಬೇಡ ಎನ್ನುತ್ತಿರಲಿಲ್ಲ. ಅಂದರೆ ಮಾತೂ ಚೊಕ್ಕವಿರಬೇಕು.

ಗೀತಾ ಕೇವಲ ಕಲಾವಿದೆಯಾಗಿರಲಿಲ್ಲ. ಎಲ್ಲರಿಗೂ ಹಿರಿಯಕ್ಕನಾಗಿದ್ದರು. ಯಾರಾದರೂ ಕಿರಿಯರು, ಅವರನ್ನು ಯಾವಾಗ ಬೇಕಾದರೂ ಹೋಗಿ ಕಂಡು ತಮ್ಮ ಕಷ್ಟ ಸುಖಗಳನ್ನು ಹೇಳಿಕೊಳ್ಳುವಂತಿತ್ತು. ಆದರೆ ಆಕೆ, ಹಿರಿಯರಿಗೆ ತಲೆಬಾಗಿ ನಡೆಯುತ್ತಿದ್ದುದನ್ನು ನೋಡಿ ಯಾರಾದರೂ ಕೂಡ "ನಡವಳಿಕೆ" ಎಂದರೆ ಏನು? ಎನ್ನುವುದನ್ನು ತಿಳಿಯುವಂತಿತ್ತು.

ಇದೇನು ಡಾಕ್ಟರು ಇಷ್ಟು ಹೊಗಳ್ತಾ ಇದಾರೆ ಅನ್ನಬೇಕಿಲ್ಲ. ಗುಣಕ್ಕೆ ಮತ್ಸರವುಂಟೆ?

ಬೆಂಗಳೂರಿನಲ್ಲಿ ಶ್ರೀಮತಿ ಕಮಲಮ್ಮ -ಶ್ರೀ ರಾಮರಾಯರಿಗೆ ಹುಟ್ಟಿದ ಗೀತಾಗೆ, ಚಿಕ್ಕಂದಿನಿಂದಲೇ ಸಂಗೀತದ ಪರಿಚಯ. ರಾಮರಾಯರು



ಗೀತಾ ವಿಶ್ವನಾಥ್‌ರವರು ನಿರ್ದೇಶಿಸಿದ 'ಮುದ್ರಾರಾಕ್ಷಸ' ನಾಟಕದ ಒಂದು ದೃಶ್ಯ



ಯಾವಾಗಲೂ ಪಿಟೀಲಿನಲ್ಲಿ ಮಗ್ನರಾಗಿರುತ್ತಿದ್ದರು... 8 ನೆಯ ವರ್ಷದಲ್ಲಿ, ಆಚಾರ್ಯ ಕೌಶಿಕ್ ಅವರ ಕೈ ಕೆಳಗೆ, ಭರತ ನಾಟ್ಯದಲ್ಲಿ ತರಬೇತಿ, ಮತ್ತು ಎಲ್ಲಾ ಕಡೆಯೂ ಹೆಸರು ಮಾಡಿದ್ದುಂಟು. ಆಚಾರ್ಯ ಕೌಶಿಕರು ತುಂಬಾ ಶಿಸ್ತು ಪಾಲಿಸುವ ಗುರು. ಅವರ ಕೈ ಕೆಳಗೆ ನುರಿತ ಗೀತಾ ಅಷ್ಟೇ ನಿಷ್ಠಾವಂತೆ. "ಕೌಶಿಕರ ತರಬೇತಿಯಲ್ಲಿ ಕಬ್ಬಿಣವೂ ಹೊನ್ನಾಗುತ್ತೆ" ಎಂದು ಗೀತಾ ತಮ್ಮನ್ನು ತಾವು ಬೈದುಕೊಳ್ಳುತ್ತಿದ್ದರು. ಅಂದರೆ ಗುರುವನ್ನು ಕಂಡರೆ ಅಷ್ಟು ಶ್ರದ್ಧೆ.

ಬೆಂಗಳೂರಿನಿಂದ 1960ರಲ್ಲಿ ಶ್ರೀ ವರದರಾಜನ್ - ಶ್ರೀಮತಿ

**✍ ಡಾ. ಮಂಜುನಾಥ್**

ಶ್ಯಾಮಲಾಂಬ ಅವರ ಸೊಸೆಯಾಗಿ, ಶ್ರೀ ವಿಶ್ವನಾಥ್ (ಬಂಡು)ನ ಪತ್ನಿಯಾಗಿ, ಬೊಂಬಾಯಿಗೆ ಗೀತಾ ಬಂದರು. ಆಗ ಶ್ರೀ ವರದರಾಜನ್ ಅವರು ACC ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಆಗಿ, ಆಗಿನ ಬೊಂಬಾಯಲ್ಲಿಯೇ ಅತಿ ಗಣ್ಯವ್ಯಕ್ತಿಯಾಗಿದ್ದರು. ಅಷ್ಟೇ ಅಲ್ಲ, ಅವರೂ -ಶ್ಯಾಮಲಾಂಬ ಉದಾರ ಮನಸ್ಸಿನವರು. ಅವರು ಅಸೋಸಿಯೇಷನ್ ಹಾಗೂ ಕನ್ನಡ ಶಾಲೆಗೆ ಇತ್ತ ದಾನ ಇಂದೂ ನಾವೆಲ್ಲರೂ ನೆನೆಯುತ್ತೇವೆ. ಅವರಿಗೆ ಗುಣವನ್ನು ಗುರುತಿಸುವುದು ಸುಲಭವಾಗಿ ಬರುತ್ತಿತ್ತು. ಅಂತೆಯೇ ಅವರು ಆರಿಸಿದ ಎಲ್ಲಾ ವ್ಯಕ್ತಿಗಳೂ, ಂಅಅ ಯನ್ನು ದೊಡ್ಡ ಕಂಪೆನಿಯಾಗಿ ಬೆಳೆಸಿದರು. ನಾನು ಕೇಳಿದಂತೆ, ಗೀತಾ ಅವರು ಸೊಸೆಯಾಗಿ ಆರಿಸಿದ ಹೆಣ್ಣು.

ನಾನು ಗೀತಾ ಮತ್ತು ಅವರ ಮನೆಯವರನ್ನೆಲ್ಲಾ ಹತ್ತಿರದಿಂದ ಬಲ್ಲೆ. ಅವರು ತಮ್ಮ ಅತ್ತೆ-ಮಾವಂದಿರನ್ನು, ತಂದೆ ತಾಯಿಯ ರೀತಿಯಲ್ಲಿಯೇ ನೋಡಿಕೊಳ್ಳುತ್ತಿದ್ದುದನ್ನು ನಾನು ಕಂಡಿದ್ದೇನೆ. ಶ್ಯಾಮಲಾಂಬ ಅವರಿಗಂತೂ ಗೀತಾ ಅಚ್ಚು ಮೆಚ್ಚು. "ನೀವು ಗೀತನ್ನ ಕೇಳಿಬಿಡಿ" ಎನ್ನುತ್ತಿದ್ದರು.

ಮಕ್ಕಳನ್ನು ಬೆಳೆಸುವುದನ್ನು ನೋಡಬೇಕು ಎಂದರೆ ಶಾರ್ವರಿ - ಶೃತ, ಇಬ್ಬರನ್ನೂ ನೋಡಿದರೆ ತಿಳಿಯುತ್ತದೆ. ಬೇರೆ ಎಲ್ಲಾ ಭಾಷೆಗಳನ್ನು ಕಲಿಸುತ್ತಿದ್ದರೂ ಮೊದಲ ಸ್ಥಾನ ಕನ್ನಡಕ್ಕೇ. ಮಕ್ಕಳಿಗೆ ಭಾರತೀಯ ಸಂಸ್ಕೃತಿಯ ಪಾಠ ಮನೆಯಲ್ಲಿಯೇ.

ಸಾಹಿತ್ಯ: ಗೀತಾಗೆ ಸಂಸ್ಕೃತ ಹಾಗೂ ವೇದಾಂತವನ್ನು ಓದುವುದರಲ್ಲಿ ಆಸಕ್ತಿ ಎಷ್ಟೋ ಅಷ್ಟೇ ಕನ್ನಡ ಸಾಹಿತ್ಯದಲ್ಲಿಯೂ. ಮೊನ್ನೆ ಮೊನ್ನೆ ತಾನೆ ಡಾ. ಸುನೀತಾ ಶೆಟ್ಟಿಯವರು 1964-65 ರಲ್ಲಿ, ಕನ್ನಡ ಶಾಲೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಗೀತಾ ಅವರೊಡನೆ ದುಡಿದಿದ್ದನ್ನು ನೆನಪು ಮಾಡಿಕೊಂಡರು.



**ಸೂತ್ರದ ಗೊಂಬೆ ನಾಟಕದ ಒಂದು ದೃಶ್ಯ**

ಗೀತಾ ಮೊದಲಿಂದರೂ ಸ್ವಂತ ಬರವಣಿಗೆಯಲ್ಲಿ ಆಸಕ್ತಿ ತೋರಿದ್ದರು. ಅವರು ಲೇಖನಗಳನ್ನು ಬರೆಯುವುದಷ್ಟೇ ಅಲ್ಲ, 3 ಸ್ವಂತ ಕೃತಿಗಳನ್ನು ಪ್ರಕಟಿಸಿದ್ದಾರೆ.

ಎಲೆಮಲೆಯ ಹಣ್ಣುಗಳು
ಮಹಿಳೆಯರಲ್ಲಿ ಮನೋವ್ಯಾಧಿ
ನಾಟ್ಯಗುರು – ಕೌಶಿಕ

ಅಂತೆಯೇ 5 ನಾಟಕಗಳನ್ನು ಬರೆದಿದ್ದಾರೆ.

ಸೂತ್ರದ ಗೊಂಬೆ
ಕೂಪ ಮಂಡೂಕ
ನಳನೋ ನಕ್ಷತ್ರಿಕನೋ
ವಿದ್ಯಾಭ್ಯಾಸ
ದೇವನೆಲ್ಲಿಹನೋ

**ಕಲೆ:** ಗೀತಾ ನೃತ್ಯದಲ್ಲಿ ಎತ್ತಿದ ಕೈ. ಆಕೆಯೇ ಸಂಯೋಜಿಸಿ ನಿರ್ದೇಶಿಸಿದ ನೃತ್ಯ ನಾಟಕಗಳು ಮುಂಬಯಿಯಲ್ಲಿ ಹಾಗೂ ಬೆಂಗಳೂರಿನಲ್ಲಿ ಜಯಭೇರಿ ಹೊಡೆದಿವೆ.

ಅಂತಃಪುರಗೀತೆಗಳು, ಕೃಷ್ಣಾಯ ತುಭ್ಯಂ, ಕೃಷ್ಣ ಪಾರಿಜಾತ, ಭಜಗೋವಿಂದಂ, ಕೋಳೂಋ ಕೊಡಗೂಸು, ಶ್ಯಾಮಲಾ ದಂಡಕಂ . . . .

ಡಿವಿಜಿಯವರ ಅಂತಃಪುರಗೀತೆ, ಇಂದೂ ಎಲ್ಲರೂ ನೆನೆಯುತ್ತಾರೆ. ಬೇಲೂರಿನ ಎಲ್ಲಾ ಶಿಲಾಬಾಲಿಕೆಯರನ್ನೂ ಒಂದೊಂದು ನುಡಿಗೆ ಆಳವಡಿಸಿದ್ದರು. ಭಜಗೋವಿಂದಂ ಅನ್ನು ಎರಡನೆಯ ಬಾರಿ ಪ್ರದರ್ಶಿಸುವುದಕ್ಕಾಗಿ "ಡಾಕ್ಟ್ರೇ, ನೀವೇ ಶಂಕರಾಚಾರ್ಯ. ನಮ್ಮನ್ನೆಲ್ಲಾ ನಿಮ್ಮ ಡೈರೆಕ್ಷನ್‌ನಲ್ಲಿ ಗೋಳು ಹೊಯ್ಸಿಕೊಂಡ ಹಾಗಲ್ಲ. ನಾಳೆಯಿಂದ ರಿಹರ್ಸಲ್‌ಗೆ ಹಾಜರಾಗಿರಿ" ಎಂದು ಎಚ್ಚರ ನೀಡಿದ್ದಲ್ಲದೆ, ಪ್ರತಿ ರಿಹರ್ಸಲ್‌ನಲ್ಲೂ ಸರಿಯಾದ ದಾರಿ ತೋರಿ, "ಚಿಕ್ಕ ಹುಡುಗರ ಹಾಗೆ ಮಾಡಬೇಡಿ, ಗಂಭೀರವಾಗಿ ಮಾಡಿ" ಎಂದು ಎಚ್ಚರ ನೀಡಿದ್ದು ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿದೆ.

ಅಂತೆಯೇ "ಸೂತ್ರದ ಗೊಂಬೆ"ಯಲ್ಲಿ "ಇನ್ನೂ ಸ್ವಲ್ಪ ಹುಡುಗುತನ ತೋರಬೇಕು" ಎಂದಿದ್ದೂ ನೆನಪಿದೆ.

ಆಕೆ ಕೆ.ಕೆ.ಸುವರ್ಣನವರ "ತನು ನಿನ್ನದು ಮನ ನಿನ್ನದು" ನಾಟಕದಲ್ಲಿ ನೀಡಿದ ಅಭಿನಯ ಇಂದೂ ಎಲ್ಲರೂ ನೆನೆಯುತ್ತಾರೆ.

**ಸಾಮಾಜಿಕ ಸೇವೆ:** ಕೇವಲ ಕಲೆ ರಂಗಭೂಮಿಗೆ ಸೀಮಿತವಲ್ಲ, ಸಮಾಜ ಸೇವೆಯಲ್ಲಿಯೂ ಗೀತಾ ತಮ್ಮನ್ನು ತಾವು ತೊಡಗಿಸಿಕೊಂಡರು. ಮಹಿಳಾ ಮಂಡಳದಲ್ಲಿ, ಬಡವ ಮಹಿಳೆಯರಿಗೆ ಉದ್ಯೋಗ ನೀಡುವುದರಲ್ಲಿ ತೊಡಗಿ ಅನೇಕ ಕಾಲ ಸೇವೆ ಸಲ್ಲಿಸಿದ್ದರು. ಮಹಿಳಾ ಮಂಡಲಕ್ಕಾಗಿ ಹಣ ಕೂಡಿಸಲು, ಷಣ್ಮುಖಾನಂದ ಸಭಾಗೃಹದಲ್ಲಿ "ಶ್ರೀ ಕೃಷ್ಣ ಪಾರಿಜಾತ" ನೃತ್ಯರೂಪಕವನ್ನು ಆಡಿದರು..

ನಾನು ಗೀತಕ್ಕನ್ನ ನೆನೆಯುವುದು ಕೇವಲ ಕಲಾವಿದೆ, ಬರಹಗಾರ್ತಿ ಅಥವಾ ಸಮಾಜ ಸೇವಕಿ ಎಂದಲ್ಲ. ಒಬ್ಬ ಅಕ್ಕನಾಗಿ, ಎಲ್ಲ ತಮ್ಮಂದಿರು – ತಂಗಿಯರನ್ನೂ ನಡೆಸಿಕೊಂಡಿದ್ದನ್ನು ನೆನೆಯುತ್ತೇನೆ. ಯುಗಕ್ಕೆ ಒಂದೇ ಹಾಡು. ಆ ಹಾಡು ನಮ್ಮೆದೆಯಲ್ಲಿ ಎಂದೂ ಗುಣು ಗುಣುಸುತ್ತಿರುತ್ತದೆ.

ಗೀತಕ್ಕನ್ನ ಹೋದ ವರ್ಷ ಬೆಂಗಳೂರಿನಲ್ಲಿ ಕಂಡು ಕಾಲಿಗೆ ನಮಿಸಿದ್ದುದು ಇನ್ನೂ ಹಸಿರಾಗಿ ನೆನಪಿದೆ. ನಮ್ಮೆದೆಯಲ್ಲಿಯ ಗೀತಕ್ಕ ಎಂದೂ ಮರೆಯಾಗುವುದಿಲ್ಲ. ■

# ಜನರ ಜೀವನವನ್ನೇ....

ಕೊಲೆಯಾಗಿತ್ತು. ಅದಕ್ಕೆ ಅದೇ ಖಡ್ಗವನ್ನು ಬಳಸಲಾಗಿತ್ತು. ಪೋಲೀಸರು ಖಡ್ಗವನ್ನು ಪರೀಕ್ಷಿಸಿದಾಗ ಅದರ ಮೇಲೆ ರಾಬರ್ಟ್ ಲೀಯ ಬೆರಳುಗಳ ಮುದ್ರೆ ಇದ್ದುದರಿಂದ ಅವನನ್ನು ಸೆರೆಹಿಡಿಯಲಾಯಿತು. ಇದು ದೊಡ್ಡ ಷಡ್ಯಂತ್ರವಾಗಿತು. ಅವನನ್ನು ನಿರಪರಾಧಿಯೆಂದು ಸಿದ್ಧ ಮಾಡಲು ಹಿರಿಯ ವಕೀಲರ ಅವಶ್ಯಕತೆ ಇತ್ತು. ಅಂಥವರ ಫೀ ಕೊಡಲು ಅಶಕ್ತಳಾದ, ಆರ್ತಳಾದ, ದುಃಖಿಯಾದ ಪತ್ನಿಗೆ ಚಿಕ್ಕ ಜಾಹೀರಾತು ಕೊಡುವ ದೊಡ್ಡ ವಿಚಾರ ಹೊಳೆಯಿತು. ಅದರಿಂದಾಗಿ ಘಟಾನುಘಟಿ ವಕೀಲರ ಸಂಪರ್ಕ ಪಡೆದಳು. ವಕೀಲರು ಚೆನ್ನಾಗಿ ಈ ಕೇಸನ್ನು ಅಭ್ಯಸಿಸಿ ಸಾಕ್ಷಿ ಆಧಾರಗಳನ್ನು ಹುಡುಕಿ, ವಾದ ಮಾಡಿ, ನಿರಪರಾಧಿಯನ್ನು ಬಂಧನದಿಂದ ಮುಕ್ತಗೊಳಿಸಿದರು.

ಮರುದಿನ ಇನ್ನೊಂದು ನಾಟಕೀಯ ಪ್ರಸಂಗ ಕಾದಿತ್ತು. ರಾಬರ್ಟ್ ಲೀ ಕಿಡ್ ನಿರಪರಾಧಿಯೆಂದು ಸಾಬೀತಾದ ಮೇಲೆ, ಮರು ದಿನ ಮುಂಜಾನೆ ಅವನ ಹೆಂಡತಿ ಗ್ಲ್ಯಾಡಿ ಕಿಡ್ ವಕೀಲರ ಮನೆಗೆ ಬಂದಳು. "ಸರ್, ನಾನು ಎಂದಿನಿಂದ ಕೆಲಸಕ್ಕೆ ರಿಪೋರ್ಟ್ ಮಾಡಲಿ?" ಎಂದು ವಿನ್ಸೆಂಟ್ ಅವರನ್ನು ಕೇಳಿದಳು. ಅವರಿಗೆ ಅರ್ಥವಾಗಲಿಲ್ಲ. "ಯಾವ ಕೆಲಸ?" ಎಂದು ಕೇಳಿದರು. "ಸರ್, ನಿಮಗೆ ನನ್ನ ಜಾಹೀರಾತಿನ ವಿಷಯ ನೆನಪಿಲ್ಲವೇ? ನನ್ನ ಗಂಡನ ಕೇಸನ್ನು ವಾದ ಮಾಡಿ ಅವನ ಜೀವ ಉಳಿಸಿಕೊಟ್ಟ ವಕೀಲರ ಮನೆಯ ಸೇವಕಿಯಾಗಿ ಹತ್ತು ವರ್ಷ ಸಂಬಳವಿಲ್ಲದೆ ದುಡಿದು ಋಣಮುಕ್ತಳಾಗುವೆ ಎಂದು ಬರೆದಿದ್ದೆನಲ್ಲ." ಎಂದಳು. ಆಗ ವಕೀಲರು ಮುಗುಳುನಗೆ ಬೀರಿ ನುಡಿದರು, "ಅದರ ಅವಶ್ಯಕತೆ ಇಲ್ಲ. ನಾನು ಅಸಂಖ್ಯ ಕೇಸು ಗೆದ್ದಿರುವೆ, ಬಹಳ ಹಣ ಗಳಿಸಿರುವೆ. ಈ ಕೇಸಿನಿಂದ ನನಗೆ ಹಣ ಬಂದಿರಲಿಕ್ಕಿಲ್ಲ. ಆದರೆ ಇದು ನೀಡಿದ ಸಂತೃಪ್ತಿಯನ್ನು ಬೇರೆ ಯಾವ ಕೇಸೂ ನೀಡಿಲ್ಲ!"ಎಂದು.

ಈ ಚಿಕ್ಕ ಜಾಹೀರಾತಿನ ಹಿಂದೆ ಎಂತಹ ರೋಮಾಂಚಕಾರೀ ಕಥೆ ಇದೆಯಲ್ಲವೇ? ಎಂದು ನಾನು ನುಡಿದಾಗ 45 ನಿಮಿಷದ ಗಂಟೆ ಬಾರಿಸಿತ್ತು. ವಿದ್ಯಾರ್ಥಿಗಳೆಲ್ಲ ಎದ್ದು ನಿಂತು 'ಸ್ಟ್ಯಾಂಡಿಗ ಒವೇಶನ್' ನೀಡಿದರು. ಒಬ್ಬ ವಿದ್ಯಾರ್ಥಿ ನನ್ನೆಡೆ ಧಾವಿಸಿ ಬದು, "ಸರ್, ನನಗೆ ಆ ಪುಸ್ತಕ ಕಡ ಕೊಡುವಿರಾ?" ಎಂದ. "ಕಡಕೊಟ್ಟ ಹಣ, ಕಡಕೊಟ್ಟ ಉತ್ತಮ ಪುಸ್ತಕ, ಮರಳಿ ಬರುವುದಿಲ್ಲ. ನಿಮಗೆ ಬೇಕಾದ ಪುಟಗಳನ್ನು ಜೆರಾಕ್ಸ್ ಮಾಡಿಸಿ ಕೊಡುವೆ" ಎಂದೆ. ■

# ನೀರೆ ನೀರಾದಾಗ

ತುಂತುರು...... ಅಲ್ಲಿ ನೀರ ಹಾಡು..... ಕಂಪನ.... ಈ ಹಾಡು ಕಿವಿಗೆ ಇಂಪು ಕೊಡುತ್ತಿರಲು ಮೆಲ್ಲಗೆ ಕಣ್ಣು ಅರಳಿಸುತ್ತಿದ್ದಂತೆ ಮೆಲ್ಲಗೆ ಕಣ್ಣು ಅರಳಿಸುತ್ತಿದ್ದಂತೆ ಎದುರಿಗೆ ರಮ್ಯಾ ಗಿಡಗಳಿಗೆ ನೀರೆರೆಯುತ್ತಿದ್ದಳು. ಶುಕ್ರವಾರ ತಲೆಗೆ ಎಣ್ಣೆ ನೀರು ಹಾಕಿ ಹಾಗೆಯೇ ಸೂರ್ಯ ದೇವರಿಗೆ ಅರ್ಘ್ಯ ಒದ್ದೆ ಕೂದಲಿಂದ ನೀರ ಹನಿ ಬೀಳುತ್ತಿದ್ದರೆ ಆತನ ಪ್ರಕಾಶಕ್ಕೆ ಆಕೆಯ ಮುಖ ರಂಗೇರಿದಂತಿದೆ. ಅಬ್ಬಾ! ರಮ್ಯಾ ಇಂದು ಎಷ್ಟೊಂದು ಸುಂದರಳಾಗಿ ಕಾಣುತ್ತಿದ್ದಾಳೆ? ಎಂದು ಕಾರ್ತಿಕ ಬೆಕ್ಕಿನ ಹೆಜ್ಜೆಯನ್ನಿಟ್ಟು, ಹೋಗಿ ಹಿಂದಿನಿಂದ ಬಲವಾಗಿ ಬಿಗಿದಪ್ಪಿದನು. ಮನ ಮೂಡಿ ಹೊದ್ದ ಚಾದರವನ್ನು ಹಾಗೆಯೇ ಸರಿಸಿ ಒಂದು ಕಾಲನ್ನು ಮಂಚದ ಕೆಳಹಾಕಲು ಟಪ್ಪನೆ ಎದೆಗೆ ಏನೋ ಬಡಿದಂತಾಯ್ತು. ಅಲ್ಲೆ ದೊಪ್ಪನೆ ಕುಳಿತು ಯೋಚನಾ ಲಹರಿಯಲ್ಲಿ...

**✍ ಹೇಮಾ ಸದಾನಂದ ಅಮೀನ್**

ಆ ರಾಕೇಶನ ಮಾತು ಕೇಳಿ ಧೈರ್ಯ ತಂದ ನನ್ನ ಧೈರ್ಯಕ್ಕೆ ಒಂದಿಷ್ಟು ಬೆಂಕಿ ಹಾಕಬೇಕು. ಹೋಗಿ ಹೋಗಿ ಅವನ ಮಾತು ಕೇಳಿದೆನಲ್ಲ! ಲೋ ಕಾರ್ತಿಕ್, ದಿನಾಲೂ ಸಪ್ಪೆ ಊಟ ಇವತ್ತು ಸಕತ್ತಾಗಿ ಹೊರ ಊಟ ಮಾಡೋಣವೆಂದಾಗ, ಬೋಳಿಮಗನ ಮಾತು ಕೇಳಿ ಬಿಟ್ಟದಷ್ಟೆ ಅಲ್ಲದೆ ಮುಂದೆ ಅವನ ತಾಳಕ್ಕೆ ಕುಣಿಯುವೆನೆಂದು ಭಾವಿಸಿರಲಿಲ್ಲ.

ಶನಿವಾರ ಅರ್ಜೆಂಟ್ ಕೆಲಸವೆಂದು ಕರೆದುಕೊಂಡು ಹೋದ, ನನ್ನನ್ನು ಹೋದದ್ದಾದರೂ ಎಲ್ಲಿ? ಆದರೂ ನನಗೆ ಮತಿ ಬೇಡವೇ? ನಾನು ಸುಮ್ನೆಯಿದ್ದು ಎದುರು ಶಿಲೆಬಾಲೆಯವರೆಲ್ಲ ದೇಹದ ಕಟ್ಟುಮಸ್ತು (ಏರುತಗ್ಗುಗಳನ್ನು) ಪರಿಶೀಲಿಸುವುದರಲ್ಲಿ ಮಗ್ನನಾಗಿದ್ದೆ ಹೊರತು 'ರಾಜೇಶ್, ಇದು ತಪ್ಪು, ನಡೆ ಮನೆಗೆ' ಎಂದು ಹೇಳಲೇ ಇಲ್ಲ. ಆ ಕ್ಷಣದಲ್ಲಿ ನನ್ನಲ್ಲಿ ಹೂವು ಬಿಟ್ಟ ಆಸೆಗಳ ಸುಗಂಧಕ್ಕೆ ಮಿತಿ ಇರಲಿಲ್ಲ. ಮತ್ತಲ್ಲಿ ದುಂಬಿಯ ಸೆಳೆತವು ಸಹಜವೇ. ಅವಳು ಶಿಲ್ಪಾ. ಅದೇ ಆ ಆರು ಮಂದಿಯಲ್ಲಿ ಮಾದಕ ನಗುವುಳ್ಳವಳು. ಏನೋ ಮನಸ್ಸಿಗೆ ನಾಟಿತ್ತು. ಆ ನಗುವಿಗೆ ಸೂಜಿ ಹಿಂದೆ ದಾರದಂತೆ ಹೊರಟೆ. ಸುವಾಸನೆಯುಳ್ಳ ಕೊಠಡಿಯಲ್ಲಿ ವಿಶಾಲ ಮಂಚ, ಮಂಚಕ್ಕೆ ಒರಗಿದ್ದ ಸಣ್ಣ ಟೇಬಲು ಅಲ್ಲಿ ಇದ್ದ ಒಂದು ಜಗ್ ನೀರು ಹಾಗೂ ಟೇಬಲ್ ಲ್ಯಾಂಪ್. ಮಧ್ಯ ಮಧ್ಯ ತನ್ನ ಕಾರ್ಯ ಚ್ಯುತಿಯಿಲ್ಲದೆ ಮಾಡುತ್ತಿತ್ತು. ಪಹರೆದಾರರಂತೆ ನೀಳವಾಗಿದ್ದವು. ಇಳಿ ಬಿಟ್ಟ ಪರದೆಗಳು ನೆರಳನ್ನು ಕಾಯುತ್ತಿದ್ದವು. ಶಿಲ್ಪಾ... ಒಳಗೆ ಪ್ರೆಶ್ಶಾಗಿ ಬಂದವಳೇ ಬಾಯಲ್ಲಿ ಚಿವಿಂಗಾಮ್ ಜಗಿಯುತ್ತ ನನ್ನತ್ತ ಇತ್ತ ನೋಟ... ಪಂದ್ಯ ಗೆಲ್ಲಲು ಹೊರಟ ವೀರನಂತೆ ಕೈ ಕಾಲು ಹೊಡೆಯುತ್ತಾ ಚಡಪಡಿಸುತ್ತಾ ಪೂರ್ಣ ಶಕ್ತಿಯಿಂದ ಮುಂದೆ ಮುಂದೆ ಹೋಗಬೇಕೆಂದು ಬಯಸಿ, ಗೆಲುವಿನ ಸುಖದ ದಡ ಸೇರಬೇಕೆಂಬ ತವಕ. ಆದರೆ, ಇಲ್ಲಿ ಎಲ್ಲಾ ಪ್ರಯತ್ನ ನನ್ನದೇ ತಾನೇ ನೀರು ನಿಂತಲ್ಲೇ ನಿಂತಿದೆ. ನದಿಯ ಪ್ರವಾಹವಾಗಿದ್ದರೆ? ಎಂಬ ಪ್ರಶ್ನೆ ಅಲ್ಲಿ ಚಿತ್ತಕ್ಕೆ ಒತ್ತಿತ್ತು. ಏನೋ ದಡ ಸೇರಿದೆ. ಆದರೂ ಗೆಲುವಿನ ಸಂಭ್ರಮವಿಲ್ಲದೇ ನಗುವಿಲ್ಲದೆ ಆ ಗಳಿಗೆಯಲ್ಲಿ ಏನೋ ಒಂದು ಬಗೆಯ ಅಸಮಾಧಾನ. ಹೇಸಿಗೆ ಪುನಃ ಹಿಂತಿರುಗಿ ನೋಡುವ ಇಚ್ಛೆಯಿಲ್ಲ. ಅಲ್ಲಿಯು ಯಾವ ಕಣ್ಣು ನನ್ನ ದೃಷ್ಟಿಯನ್ನು ಬಯಸಿದ್ದಲ್ಲ. ಭಾರವಾದ ಮನಸ್ಸು ಹಗುರವಾಗಲೆಂದು ಹೊರಟಿದ್ದು ಈಗ ಇಮ್ಮಡಿ ಭಾರ. ಮತ್ತಲ್ಲಿ ನಿಲ್ಲಲೂ ಅಸಾಧ್ಯ.

ರಾಜೇಶನು ಇಲ್ಲದಿದ್ದಾಗ ಅವನಿಗಾಗಿ ಕಾಯುವ ಗೋಜಿಗೆ ಹೋಗದೆ ನೇರವಾಗಿ ಬಾಂದ್ರ ಬಾಂಡ್ ಸ್ಟೆಂಡ್ ಕಲ್ಲುಗಳ ಮಧ್ಯ ಹೋಗಿ ಕುಳಿತೆ. ನನ್ನೆಡೆ ನಗುವುದೋ ಅಳುವುದೋ ಎಂಬಂತೆ ಆ ಅಲೆಗಳ ಮೌನದ ಭಾಷೆಯನ್ನು ಅರಿಯದಾದೆ. ಸತ್ಯ ಹೇಳುವುದಾದರೆ ನನ್ನುನ್ನು ಅರ್ಥ ಮಾಡಿದವರೂ ಯಾರೂ ಇಲ್ಲ. ಅಮ್ಮ ಸೋದರ ಮಾವನ ಆಸರೆಯಲ್ಲಿ ನಮ್ಮನ್ನು ಬೆಳೆಸಿದ್ದು. ಅಕ್ಕನ ಮದುವೆಯ ಬಳಿಕ ನಾನು ವಿದ್ಯೆಯಿಂದ ಬಲ ಸಾಧಿಸಿ ಅಮ್ಮನ ಬಾಗಿದ ಬೆನ್ನನ್ನು ಸರಿಪಡಿಸಬೇಕೆಂಬ ಹಂಬಲದಿಂದ ಮುಂಬಯಿಯಲ್ಲಿ ಕಾಲೇಜಿನ ಜೊತೆಗೆ ನೌಕರಿ ಮಾಡುತ್ತಿದ್ದ ನನ್ನ ಅವಶ್ಯಕತೆಯನ್ನು ಪೂರೈಸಲು ಸರಿಯಾಯ್ತು. "ಜೀವನದಲ್ಲಿ ಗುರಿ ಸಾಧಿಸಬೇಕಾದರೆ ಅರ್ಜುನನಂತೆ ಲಕ್ಷ್ಯಕ್ಕೆ ಕಣ್ಣಿಡಬೇಕು ಎಂಬ ಪ್ರೊಫೆಸರ್ ಮಾಧವರಾಯರ ಮಾತು ಕಿವಿಗೆ ಬಿದ್ದಾಗಲೆಲ್ಲಾ ಏಕಾಗ್ರತೆಯಲ್ಲೇ ಚುಂಬಕದಂತೆ ಅಂಟಿಕೊಂಡಿದ್ದೆ. ಹೌದು, ಈಗ ಹಣದ ಉಬ್ಬರ ಕ್ರಮೇಣ ಹೆಚ್ಚುತ್ತಾ ಬಂತು. ಆದರೆ, ಮಿಕ್ಕೆಲ್ಲ ವಿಷಯದಲ್ಲಿ ಗಮನವೇ ಕೊಡದೇ ಕಾಲಘಟ್ಟ ನನ್ನ ಪಾಲಿನ ಮೂವತ್ತೊಂದು ವರ್ಷ ನೀರಸವಾಗಿ ಸಾಗಿಸಿತು. ಅಮ್ಮನಿಗೆ ನನ್ನ ಮದುವೆಯ ಚಿಂತೆ ಕಾಡಲಾರಂಭಿಸಿತು. "ಗುರಿಯ ಪಥದಲ್ಲಿ ಮನೆ, ಮದುವೆ, ಮಕ್ಕಳು ಅಡಕವಾಗಿರುವುದು" ಎಂದು ಮೊದಲ ಗುರುವಿನ ಆಜ್ಞೆ ಮೀರುವಂತಿರಲಿಲ್ಲ.

ಅಕ್ಕನಿಗೆ ನನಗೆ ಹೆಣ್ಣು ನೋಡುವ ಜವಾಬ್ದಾರಿಯನ್ನು ನೀಡಲಾಯ್ತು. ಅವಳು ಅದನ್ನು ನಿಷ್ಠೆಯಿಂದ ಮಾಡಿದರೂ ನನಗೆ ಬರಿ ಕಷ್ಟವೇ. ನನಗೆ ಈಗಲೂ ಸರಿ ನೆನಪಿದೆ. ಊರಲ್ಲಿ ಕಲಿತ ಗುಗ್ಗು ಎಷ್ಟೆಂದರೂ ಅಷ್ಟೇ. ಹುಡುಗ ನೋಡಲು ಬರುತ್ತಾರೆಂದು ತಿಳಿದೊಡನೆ ಬೇರೆ ಹುಡುಗಿಯರದು ಎಂಥಹ ಥಳಕು-ಬಳುಕು! ಆದ್ರೆ ನಾನಂದು ಹೋಗಲು, ತಲೆಗೆ ಎಣ್ಣೆ ಹಚ್ಚಿ ಬಿಗಿ ಜಡೆ ಹಾಕಿ ಕಡು ಕಂದು ಬಣ್ಣದ ಅಗಲ ಬಾರ್ಡರ್ ಸೀರೆ ಉಟ್ಟು ಮುಡಿ ತುಂಬಾ ಹೂವು ಹಾಕಿ "ಎರಡು ಕನಸು" ಚಿತ್ರದಲ್ಲಿ ನಟಿ ಕಲ್ಪನಾ 'ಪೂಜಿಸಲೆಂದು ಹೂಗಳ ತಂದೆ' ಎಂಬ ಭಕ್ತಿಗೀತೆ ಹಾಡಲು ಕುಳಿತಂತೆ ಕುಳಿತಿದ್ದಳು. ನೋಡಿದಾಕ್ಷಣ ಆಸೆಗೆ ಪೂರ್ಣವಿರಾಮ. ಆದ್ರೆ ಭಾವನವರ ಪರಿಚಯವೆಂದು ಮುಖದಲ್ಲಿ ಮಂದನಗೆಯ ಛಾಯೆಯನ್ನು ಮಾಸಲು ಬಿಡಲಿಲ್ಲ. ಆಕೆ ಕಲಿತದ್ದು ಬರೇ ಬಿ.ಎ. ಗ್ರಾಜ್ಯುವೇಶನ್. ಏನಾಗುತ್ತದೆ ಈಗ ಅಷ್ಟರಲ್ಲಿ? ಇತರ ಟೆಕ್ನಿಕಲ್ ನೋಲೆಡ್ಜ್ ಯಾವುದೂ ಇಲ್ಲ. ಯಾವ ಬಗೆಯಲ್ಲಿ ನಿರಾಕರಿಸಲೂ ಪ್ರಯತ್ನಿಸಿದರೂ ಅಕ್ಕನ ಆಲಾಪ. ಕಾರ್ತಿಕ್ ನಮಗೆ ಮನೆ ಸಂಸಾರ ನೋಡಿಕೊಳ್ಳುವ ಹೆಣ್ಣು ಬೇಕೆ ಹೊರತು ಹೊರಗಿನವರ ಕಣ್ಣಿಗೆ ರಂಗಾಗಿ ತೋರುವ ಹೆಣ್ಯಾಕೆ? ರಮ್ಯಾ ಒಳ್ಳೆ ಲಕ್ಷಣವಾಗಿದ್ದಾಳೆ. ಹಳ್ಳಿಯಲ್ಲಿ ಸ್ವಲ್ಪ Reserved ಆಗಿದ್ದಾಳೆ. ಮುಂಬಯಿಯಲ್ಲಿ ಒಂದು ವರುಷದಲ್ಲಿಯೇ ನೋಡು ಬದಲಾವಣೆ. ಅದಲ್ಲದೆ ನಿನ್ನ ಭಾವನ ಪರಿಚಯದವರು. ಬೇಡವೆಂದರೆ ನಿನ್ನ ಭಾವನಿಗೆ ಬೇಸರವಾಗಬಹುದು ಕಣೋ. ಹ್ಞೂಂ ಅನ್ನೋ. ಮತ್ತೇನು ನಾನೇ ಬಲಿಯ ಕುರಿಯಂತೆ ಹಸೆಮಣೆಯನ್ನೇರಿದೆ.

ಇನ್ನೇನು ಮಾಡುವುದೆಂದು ನಿಭಾಯಿಸಲಾರಂಭಿಸಿದೆ. ಅವಳ ಅಸಭ್ಯತನಕ್ಕೆ ಅದೆಷ್ಟೋ ಬಾರಿ ರೋಸಿದ್ದುಂಟು. ಆದರೆ, ಅದು ಪೆದ್ದು... ಉಹ್ಞೂಂ ಇಲ್ಲ, ಹ್ಞೂಂ ಇಲ್ಲ. ಒಳ್ಳೆ ಬುದ್ದಿವಾದ ಮಾಡಿ ಕಳಿಸಿದ್ರೂ ಅವರ ಮನೆಯವರ, ಒಟ್ಟಾರೆ ನನ್ನ ಕರ್ಮ ಹೋಗಿ ಹೋಗಿ ನನಗೆ ಈ ಕೆಸರು ಗಂಡಿಯೇ ಗತಿ. ನಮ್ಮಮ್ಮನಿಗೆ ಮಾತ್ರ ಅವಳ ಆ ಮೂಢತನ ಬಲು ಇಷ್ಟ. ಇಷ್ಟವಾಗದೇನಂತೆ? ಇಡೀ ದಿನ ಅತ್ತೆ ಸೇವೆ. ಅತ್ತಲೆ ಲೀಲೆ ಪಾರಾಯಣ. ಹಾಗೆ ನೋಡಿದ್ರೆ ನನಗಿಂತ ನನ್ನ ಅಮ್ಮ ಖುಷಿಯಿಂದಿದ್ದಾರಲ್ಲ. ಅದೇ ಒಂದು ಬಗೆಯ ನೆಮ್ಮದಿಯಿಂದ ರಮ್ಯನಲ್ಲೂ ಪ್ರೀತಿ ಅರಳಲಾರಂಭಿಸಿತು. ಐದು ವರುಷದಲ್ಲಿ ಅನಘ ಅಭಿಮನ್ಯು. ಈಗ ಅವಳ ಬಲವಾದರೂ ನನಗೂ ಅಭ್ಯಾಸವಾಯ್ತು. ಆದರೆ, ಈಗ ಅವಳ ಪ್ರೀತಿ ಹಂಚಿಹೋಯ್ತು. ಅಷ್ಟೇ ಅಲ್ಲ ಸ್ವಲ್ಪ ಮಟ್ಟಿಗೆ ಬಿಗಿಯೂ ಆದಳು. ನನ್ನ ಸಿಟ್ಟನ್ನು ರಟ್ಟಿನಂತೆ ಹಾರಿಸಿ ಬಿಡುತ್ತಾಳೆ. ಇದೇ ರಮ್ಯಾ ಮುಂಚೆ ನನ್ನ ದೃಷ್ಟಿ

ಸ್ವಲ್ಪ ವಕ್ರವಾದರೂ ಬೆಕ್ಕಿನ ಮರಿಯಂತೆ ಕುಂಯಿ.. ಹಸು ಕರುವಿನಂತೆ ಬೆಚ್ಚಿ ಬೀಳುತ್ತಿದ್ದಳು. ಮಕ್ಕಳಾದ ಖುಷಿಯೂ ಹೆಚ್ಚಾಗಿದೇನು? ಸರಿಯೇ. ಆದ್ರೆ ಮಡದಿ ಲಕ್ಷ್ಯ ಹೋಗ್ತದೆ ಎಂದು ಹಿರಿಯರು ಅನ್ನುವುದೂ ಸರಿಯೆ. ಮನೆಯ ಕೆಲಸ, ಮಕ್ಕಳ ಶಿಕ್ಷಣದಲ್ಲಿ ಉಸಿರಾಡಲು ಪುರುಸೊತ್ತಿಲ್ಲ. ಇತ್ತೀಚೆಗೆ ಪ್ರೀತಿ ಕಾಳಜಿಯೂ ಕುಗ್ಗಿದೆ. ನಾನು ಅವಳಿಗಾಗಿ ಕಾದು ಕಾದು ಸೋತಾಗ ಮೇಡಂನವರ ಎಂಟ್ರೀ. ಮಂಚದಲ್ಲೂ ಅಮ್ಮನ ಮದ್ದು. ಅನಘನ ಶಾಲೆಯ ಪ್ರೋಜೆಕ್ಟ್, ಇನ್ಸುರೆನ್ಸ್ ಕಂತು. ಆ ಬಿಲ್, ಈ ಬಿಲ್ ಎಲ್ಲಾ ಲೆಕ್ಕಾಚಾರ ಮಂಚದಲ್ಲಿಯೇ ನೆನಪಾಗುವುದು. ಮಂಚವನ್ನು ಅಕ್ಷರಶಃ ಕಚೇರಿ ಮಾಡಿಬಿಡ್ತಾಳೆ. ಬ್ಯಾಲೆನ್ಸ್ ಶೀಟ್ ಟ್ಯಾಲಿ ಮಾಡುತ್ತಿರುವಾಗ ಮತ್ತೆಲ್ಲಿಯ ರಸಿಕತೆ. ದಿಂಬನ್ನು ಮಧ್ಯಕ್ಕೆ ಬಡಿದು ನಿದ್ದೆಗೆ ಶರಣು. ಹಗಲಲ್ಲಿಯೂ ನಾನೇ ಹುಚ್ಚು ನಾಯಿ ತರಹ ಅವಳ ಹಿಂದೆ ಹಿಂದೆ ಕಿಚನ್‌ಗೊಮ್ಮೆ ಹಾಲ್‌ಗೊಮ್ಮೆ ಓಡಾಡಿದರೂ ಉತ್ತರ ಒಂದೇ ಏನ್ ಮಾಡುತ್ತಿದ್ದೀರಿ ಮಕ್ಕಳ ಎದುರಿಗೆ ಇದೆಲ್ಲ ಸರಿ ಕಾಣಿಸುತ್ತಿದಯೇ' ಅಯ್ಯೋ... ಸರಿ ಕಾಣುವುದಾ. ಈಗ ಅದೇ ಮಕ್ಕಳು ಮರ್ಡರ್ ಸಿನೆಮಾ ನೋಡುತ್ತಾರೆ. ಅವಳ ಈ ತಿರಸ್ಕಾರ ಸಿಟ್ಟೇರಿಸುತ್ತದೆ. ನಾನು ಕ್ಯಾರ್ ಮಾಡಬಾರದು ಎಂಬ ರೋಷ ಒಳಗೊಳಗೆ ಕುದಿಯುತ್ತಿತ್ತು. ಆ ಕುದಿ ಭಾಷ್ಪ ರಾಜೇಶ್‌ಗೆ ತಟ್ಟಿತು. ತಾನಂತೂ ಬಾವಿಯಲ್ಲಿ ಬಿದ್ದ, ನರಿಯಂತಿದ್ದ ನನ್ನಂತಹ ಮೂರ್ಖನನ್ನು ಒಳಗೆ ಕರೆಯೋದು ಸಹಜವೇ.

ಸೂರ್ಯ ಸಮುದ್ರ ಮನೆ ಸೇರಿ ಬಾಗಿಲು ಮುಚ್ಚುತ್ತಿರಲು ನಾನು ನನ್ನ ಮನೆ ಸೇರಬೇಕೆಂಬ ಅರಿವಾಯ್ತು. ಮನೆಗೆ ಹೋಗಿ ಡೆಟಲ್ ಸೋಪು ಹಚ್ಚಿ ಸರಿ ಸ್ನಾನ ಮಾಡಿದೆ. ನಿದ್ರೆ ಇಂದು ಕೈ ಕೊಟ್ಟಂತೆ. ಕಣ್ಣು ರಮ್ಯಾಳ ಭಂಗಿಯನ್ನೇ ನೋಡುತ್ತಿತ್ತು. ಮನೆ ಮಕ್ಕಳ ಜೊತೆ ಬೆರೆತಾಗ ಮನೆಯಲ್ಲಿ ಕವಿದ ಮೋಡಗಳು ಶಿಲ್ಪಾನ ನೆನಪಲ್ಲಿ ಮಸುಕಾಯಿತು. ನನ್ನಲ್ಲಿ ಪರಿವರ್ತನೆ ಕಂಡರೂ ರಮ್ಯಾಳಲ್ಲಿ ಏನೂ ಇಲ್ಲ. ಸೋತಿದೆ ಅವಳ ವರ್ತನೆಗೆ ನನ್ನ ವಾಂಛೆಗಳನ್ನು ಪೇಪರ್ ಹೋಲ್ಡರ್ ಕೆಳಗೆ ಒತ್ತಿಟ್ಟಂತೆ ಇಡುತ್ತಾ ಬಂದೆ. ಕೆಲವು ಸಲ ಅಪ್ಪಿ ತಪ್ಪಿ ಪೇಪರ್ ತನ್ನ ಸ್ಥಿಮಿತ ಕಳೆಯುವುದು ಅದು ಗಾಳಿ ಹೆಚ್ಚಾದಾಗ. ಈ ವಿಷಯ ಈಗ ಮುಗಿದ ಕಥೆ. ಅಂದು ಬೆಳಿಗ್ಗೆ ಆಫೀಸಿಗೆ ರೆಡಿಯಾಗಿ ಆಟೋಗಾಗಿ ಕಾದು ನಿಂತಿದ್ದೆ. ನಾನು ಒಳಗೆ ಕುಳಿತಂತೆ ಧಾವಿಸಿ ಬಂದ ಗಾಳಿಯಂತೆ ರೋಜಿ ಬಂದು ಕುಳಿತಳು. ಜೊತೆಗೆ ಒಂದಿಷ್ಟು ಸುಮಧುರ ಹೂವುಗಳ ಕಂಪು. ಅವಳ ಮೈಮಾಟ, ಉಡುಗೆ ನೀಡಿತು ಈ ಮನಕೆ ಇಂಪು.

"Ex-cuse me, I am Sorry ಲೇಟ್ ಆಯ್ತು. ಅದಕ್ಕೆ ತಮಗೆ ಕೇಳದೇ ದೂರದಿಂದ ನೋಡಿ ಓಡಿ ಬಂದೆ ಅಂದಳು.

"ಓಹ್... ಪರವಾಗಿಲ್ಲ" ಅಂದೆ. ನೀನು ಬಂದದ್ದು ಬೇಸರವಿಲ್ಲ ಖುಷಿ ಮರಾಯ್ತಿ. ಇದೆ ಯಾರಾದ್ರೂ ಗಂಡಸರು ಬಂದಿದ್ದರೆ ಮಾತ್ರ, ಮ್ಯಾನರ್ಸ್ ಬೇಕ್ರಿ ಸಾರ್ ಎಂದು ಎರಡು ಹಿತನುಡಿ ಖಂಡಿತ ಉಚಿತವಾಗಿ ದೊರಕುತ್ತಿತ್ತು. ಆಟೋದಲ್ಲಿ ಸ್ಥಳವಿದ್ದರೂ ಅವಳ ಸ್ಪರ್ಶ ನನ್ನ ತೋಳಿಗೆ ಏನೋ ಉನ್ಮಾದದ ಕರೆಗಂಟೆ ಮುಖದಲ್ಲಿ ನಗು ಮಾಯವಾಗಲಿಲ್ಲ. ಮಾತಲ್ಲಿ ಸೌಹಾರ್ದತೆ ಜ್ವಲನಶೀಲವಾಗಿತ್ತು. ಮತ್ತೆ ಮರುದಿನವೂ ಕಣ್ಣು ಅವಳಿಗಾಗಿ ಕಾತರಿಸಿತು. ಬಂದಳು. ಅವಳೇ ಬಂದಳು. ಸರಾಗವಾಗಿ ಇದೀಗ ತಿಂಗಳೆರಡು ಆಫೀಸಿನಲ್ಲಿ ಸ್ವಲ್ಪ ಪಿಸುಮಾತಿನ ಒಗ್ಗರಣೆ ನಮ್ಮ ಸ್ನೇಹಕ್ಕೆ. ಆದರೂ ಏನನ್ನೂ ಲೆಕ್ಕಿಸಲಿಲ್ಲ. ಆ ಅವಸ್ಥೆಯಲ್ಲಿ ನಾನು ಇರಲಿಲ್ಲ. ಇಲ್ಲಿ ಟೈಮ್ ಯಾರಿಗೆ ಉಂಟು. ನಾಳೆ ಯಾವ ಡ್ರೆಸ್... ಅವಳನ್ನು ಯಾವ ಮೂವಿ ಸಿನೆಮಾ ತೋರಿಸಲು ಕೊಂಡೊಯ್ಯಬೇಕು. ಯಾವ ಮಾಲ್‌ನಲ್ಲಿ ಗಿಫ್ಟ್ ಕೊಡಿಸಲಿ ಇದೇ ಮಾತು ತಲೆಯನ್ನು ಆವರಿಸಿತು. ಈ ಬದುಕೇ ಚೆನ್ನ. ಇದನ್ನೇ ಕಾಯುತ್ತಿದ್ದದೆಂದು ನಾ ಭಾವಿಸಿದ್ದೆ. ಮನದಲ್ಲಿ ಅಡಗಿದ್ದ ಆಸೆ ಆಕಾಂಕ್ಷೆಗಳನ್ನು ಮನ ಬಿಚ್ಚಿ ಹೇಳಲು ಕಾತರಿಸುತ್ತಿದ್ದೆ. ಮುಂದಿನ ಬಾಳಿನ ಸುಂದರ ಸಮಯ ಎಕೌಂಟ್ ಓಪನ್ ಮಾಡಬೇಕೆಂಬ ಆಸೆ. ಅದಕ್ಕೆ ಶುಭ ಮೂಹೂರ್ತ ನೋಡುತ್ತಿದ್ದೆ. ದೇವರ ನನ್ನ ಆಸೆ ಈಡೇರಿಸಲೆಂದು, ನಮ್ಮ ಆಫೀಸ್ ಸ್ಟಾಫ್ ಪಿಕ್‌ನಿಕ್ ಎರೇಂಜ್ ಮಾಡಿದ್ದರು. ಲೋನಾವಾಲಕ್ಕೆ. ಮನೆಯಲ್ಲಿ 'ಕೇವಲ ಗಂಡಸರೇ' ಎಂದು ಹೊರಟೆ. ಮಕ್ಕಳ ನಡುವೆ ಅವಳಿಗೆ ಬೇರೇನೂ ಕೂಲಂಕುಷವಾಗಿ ಅರಿಯುವ ಗೋಜು ಇಲ್ಲ. ಒಂದು ರೀತಿಯ ಅಸಡ್ಡೆ ಸ್ವಭಾವ ಅದೇ ರೋಜಿ... ನನ್ನ ಪ್ರತಿಯೊಂದು ಬೇಕು ಬೇಡಗಳನ್ನು ಸೂಕ್ಷ್ಮವಾಗಿ ಗಮನಿಸಿ, ಈಡೇರಿಸುವಳು.

ಐ ವಿಲ್ ಬೀ ವೇರಿ ಲಕಿ, ಇಫ್ ಐ ಗೆಟ್ ರೋಸಿ ಇನ್ ಮೈ ಲೈಫ್ (I will be verry lucky, if I get Rosy in my life). ಪಿಕ್‌ನಿಕ್‌ನಲ್ಲಿ ನನಗೆ ಬೇಕಾಗುವ ವಸ್ತುಗಳಿಗಿಂತ ಅವಳಿಗಾಗುವ ವಸ್ತುಗಳೇ ಹೆಚ್ಚಿತ್ತು. ಆದರೂ ಅವಳಿಗಾಗಿ ನಾನು ಕೂಲಿಯಾಗಲೂ ರೆಡಿ. ಮೊದಲ ದಿನ ನಾವಿಬ್ಬರೂ ನಮ್ಮಲ್ಲಿ ಪೂರ್ಣ ಪ್ರಮಾಣದಲ್ಲಿ ಸ್ವಚ್ಛಂದವಾಗಿ ತಿರುಗಾಡಿದೆವು. ಮುದ್ದಾಡಿದೆವು. ಕನಸುಗಳನ್ನು ಬಿಚ್ಚಿದೆವು. ರಾತ್ರಿಯಾಗುತ್ತಾ ಬಂದಾಗ ಆಸೆ ಗಿರಿ ಏರುತ್ತಿತ್ತು. ಭಾವನೆಗಳು ಕೆಣಕುತ್ತಿದ್ದವು. ಊಟಕ್ಕೆ ಎಲ್ಲರೂ ಒಟ್ಟಿಗೆ ಕುಳಿತಾಗಲೂ ಎದುರೆದುರಿಗೆ ಕುಳಿತ ನಮ್ಮ ಕಾಲು ಸ್ಪರ್ಶ ಚೇಷ್ಟೆಯಲಿ ನಿರತವಾಗಿದ್ದವು. ಆಟವಾಡುತ್ತಿದ್ದವು. ಇಂದು ಹೇಗಾದರೂ ಧೈರ್ಯ ಮಾಡಿ ನನ್ನಾಸೆ.. ಅವಳಲ್ಲಿ... ಅವಳಾಸೆ ನನ್ನಲ್ಲಿ ವಿಲೀನವಾಗಬೇಕೆಂಬ ಕಲ್ಪನೆ ಹುಟ್ಟಾಯ್ತು.

ನಾನು ರೂಮಿಗೆ ಹೋದೆ. ಹಾಗೆಯೇ ವಾಲೆಟ್ ಅಲ್ಲೇ ಮರೆತಿದ್ದೆ ಎಂದು ನೆನಪಾಗಿ ಹಿಂದೆ ಬರಲು ಮರದ ಹಿಂದಿನ ಮಾತು ನನ್ನನ್ನು ನಿಲ್ಲಿಸಿತು. ಕಿವಿಕೊಟ್ಟು ಕೇಳಿದೆ. ಯಾಕೆಂದರೆ ಅಲ್ಲಿ ಗಂಡಸಿನ ಸ್ವರದಲ್ಲಿ ರೋಸಿ ಎಂಬ ಹೆಸರು ನನ್ನ ಬೆಚ್ಚಿ ಬೀಳಿಸಿತು.

ಇನ್ನೆಷ್ಟು ಜನರನ್ನು ನಿನ್ನ ಪ್ರೇಮ ಜಾಲದಲ್ಲಿ ಸಿಕ್ಕಿಸುವೆ ಮಾನಘಾತಕಿ..? ನನ್ನನ್ನು ಪಾಪರ್ (Nill) ಮಾಡಿದ್ದು ಸಲದೇ. ಇದೀಗ ಕಾರ್ತಿಕ್ ಹಿಂದೆ ಬಿದ್ದಿರುವೆ.. ಎಂದಾಗ ಎದೆಗೆ ಯಾರೋ ಬಲವಾಗಿ ಗುದ್ದಿದ ಹಾಗೆ... ಆದರೂ ಅವಳ ಉತ್ತರಕ್ಕೆ ಕಾತರಿಸುತ್ತಿದ್ದೆ. ಅವಳೂ ನಿಜವಾಗಿಯೂ ನನ್ನ ಪ್ರೀತಿಸುತ್ತಿದ್ದರೆ ಈ ಲಫಂಗನನ್ನು ಈಗಲೆ ಎರಡೇಟು ಬಾರಿಸಿ ಹೊರಗೆ ತೊಲಗಿಸುವ ಎಂದೆಣಿಸಿಯೇ ಇದ್ದೆ. ಅಷ್ಟರಲ್ಲಿ..

"ಜಾನ್, ಯಾರು ಹೇಳಿದ್ದು ನಾನು ನಿನ್ನ ಪ್ರೀತಿಸುತ್ತಿದ್ದನೆಂದು ಅಥವಾ ಕಾರ್ತಿಕ್‌ನನ್ನು ಪ್ರೀತಿಸುವೆನೆಂದು. ನೀವು ಸೆಂಟಿಮೆಂಟಲ್ ಫೂಲ್‌ಗಳು. ಹುಡುಗಿಯರನ್ನು ಕಾಣಲೇ ಇಲ್ಲ ಎಂಬಂತೆ ಒಂದಿಷ್ಟು ನಕ್ಕು ಮಾತನಾಡಿದರೆ ಹೃದಯವನ್ನು ಕಿಸೆಯಲ್ಲಿಯೇ ಇಟ್ಟು ತಿರುಗುವಂತೆ ನಮ್ಮ ಕಾಲಲಿ ಬಿದ್ದು ಪ್ರೇಮ ಭಿಕ್ಷೆ ಬೇಡುವಿರಿ. ಅದೂ ಕೇವಲ ಹುಡುಗಾಟಕೆ ನಿಮ್ಮ ಆಸೆ ತೀರಿಸುವ ನಾಟಕವದು. ನಿಮ್ಮಂತಹ ಫೂಲ್‌ಗಳಿರುವಾಗ ನಮ್ಮಂತವರ ಅಂಗಡಿಯು ಜೋರಾಗಿ ನಡೆಯುವುದು... ಹ್ಹೂಂ... ಪ್ರೇಮವಂತೆ ಪ್ರೇಮ....

ಇನ್ನು ಇದೊಂದು ಬಾಕಿಯಿತ್ತು. ಕೋಪ, ಸೀಮೆಯ ಚೌಕಟ್ಟು ದಾಟಿ ಬಂದರೂ ಅವಮಾನಕ್ಕೆ ಅತಿಥಿಯಾಗಬಾರದೆಂದು ಬಾಯಿ ಮುಚ್ಚಿ ಅಲ್ಲಿಂದ ಹೊರಟೆ. ಮತ್ತೆ ಪುನಃ ಅಲ್ಲಿ ನಿಲ್ಲುವುದು ಯಾತನೆಕ್ಕಿಂತ ಕಡಿಮೆಯಾಯಿತು. ಬಸ್ಸಲ್ಲಿ ಆಕೆ ಹತ್ತಿರ ಬಂದಂತೆ ತಿಳಿನೀರ ಕೆಸರು.... ಮುಳುಗಬೇಕೆಂಬ ಆಸೆಯಿಂದ ಕಾಲಿಟ್ಟೇ.... ಕೆಸರೆಲ್ಲ ಕದಡಿತು. ದೂರ ಹೋಗಬೇಕೆಂಬ ಆಸೆ. ಮೈಯೆಲ್ಲಾ ಪರಿಶುದ್ಧವಾಗಬೇಕೆಂಬ ಆಸೆ, ಬರೆ ಮೈಯಲ್ಲಿ ಈ ಮನವನ್ನು ತೊಳೆಯಬೇಕು ಶುದ್ಧ ಜಲದಿಂದ.. ಹೌದು ನದಿನೀರಿನಿಂದ....

ಮನೆಗೆ ಬಂದವನೇ.. ಸ್ನಾನ ಮಾಡಿದೆ.. ಎದುರಿಗೆ ರಮ್ಯಾ ಟವೆಲ್ ಹಿಡಿದು ನಿಂತಿದ್ದಳು. ನನ್ನ ಕೂದಲಲಿದ್ದ ನೀರನ್ನು ಅವಳಿಗೇ ಚಾಡಿಸಿದೆ. ಪುನಃ ನಕ್ಕಳು ನಾಚಿದಳು. ನನ್ನ ರಮ್ಯಾ ಅದೇ ಶುದ್ಧ ನದಿಯಂತೆ ಹರಿದಳು. ■

# ಲೈಂಗಿಕ ಶಿಕ್ಷಣದ ಅಗತ್ಯ–ಸ್ತ್ರೀವಾದಿ ಚಿಂತನೆ

(ಕಳೆದ ಸಂಚಿಕೆಯ ಉಳಿದ ಭಾಗ)

ಪರಸ್ಪರ ಸಹಮತಿಯಿಂದ ನಡೆಸಿದರೆ ಆನಂದದಾಯಕ ಕ್ರಿಯೆ ಎನ್ನುವುದನ್ನು ವಿವರಿಸುವ ಅಗತ್ಯವಿದೆ. ಹೆಣ್ಣಿನ ಸಹಮತಿ ಹಾಗೂ ಅನುಮತಿ ಪಡೆಯುವ ಅಗತ್ಯದ ಕುರಿತು ಅರಿವು ಮೂಡಿಸಬೇಕಾಗಿದೆ. ಸಿನೇಮಾಗಳಲ್ಲಿ ಹೆಣ್ಣನ್ನು ಬೆನ್ನತ್ತಿ ಒತ್ತಾಯಪೂರ್ವಕ ಒಲಿಸಿಕೊಳ್ಳುವಂತೆ ನಿಜಜೀವನದಲ್ಲಿ ಸಾಧ್ಯವಿಲ್ಲ ಎನ್ನುವುದನ್ನು ಮನಗಾಣಿಸಬೇಕಾಗಿದೆ. ಇದರಿಂದಾಗಿ ಹೆಣ್ಣಿನ ಅಸಮ್ಮತಿಯಿಂದ ಕೆರಳಿ ಆಸಿಡ್ ಎಸೆತ, ಚಾಕು–ಚೂರಿ ಆಘಾತ ಮಾಡುವಂತಹ ದೌರ್ಜನ್ಯಗಳು ನಿಲ್ಲಬಹುದು. ಅಂತರ್ಜಾಲ ಲೈಂಗಿಕ ತಾಣಗಳಲ್ಲಿ, ಮಾಸಿಕ ಪತ್ರಿಕೆಗಳಲ್ಲಿ ನೀಡಲಾಗುವ ಅಸಹಜ ಲೈಂಗಿಕ ಚಟುವಟಿಕೆಗಳು ಕ್ಷೇಮಕರವಲ್ಲ ಹಾಗೂ ನಿಜಜೀವನದಲ್ಲಿ ಸಾಧ್ಯವೂ ಅಲ್ಲ ಎನ್ನುವ ಮಾಹಿತಿಯನ್ನು ನೀಡುವುದು ಅತೀ ಅಗತ್ಯ. ಇದರಿಂದಾಗಿ ವಿಕೃತಮನಸ್ಸುಗಳು ಮಾಡುವ ಅಪರಾಧಗಳ ಪ್ರಮಾಣ ಕಡಿಮೆಯಾಗಬಹುದು. ಮುಖ್ಯವಾಗಿ ಅಮಾಯಕ ಮಕ್ಕಳು ವಿಕೃತಕಾಮುಕರ ಕೈಗೆಟುಕದಂತೆ ಮಾಡುವಲ್ಲಿ ಸಮಾಜದ ಜವಬ್ದಾರಿ ಹೆಚ್ಚಾಗಿದೆ.

ಟೆಲಿವಿಷನ್ ಹಾಗೂ ಅಂತರಜಾಲದಿಂದಾಗಿ ಲೈಂಗಿಕತೆಯು ಗೋಪನೀಯ ವಿಷಯವಾಗಿ ಉಳಿದಿಲ್ಲ ಎನ್ನುವುದನ್ನು ನಾವೆಲ್ಲರೂ ಅರಿತು ಮುಂದಕ್ಕೆ ಹೆಜ್ಜೆ ಇಡಬೇಕಾಗಿದೆ. ಸಧ್ಯದ ಪರಿಸ್ಥಿತಿಯಲ್ಲಿ ಒಟ್ಟಿನಲ್ಲಿ ಸುರಕ್ಷಿತ ಹಾಗೂ ಆರೋಗ್ಯಕರ ಲೈಂಗಿಕ ಸಂಬಂಧದ ಕುರಿತು ಸರಿಯಾದ ಮಾಹಿತಿಯು ಬೆಳೆಯುತ್ತಿರುವ ಮಕ್ಕಳಿಗೆ ಅಗತ್ಯಕ್ಕನುಗುಣವಾಗಿ ಹಂತಹಂತದಲ್ಲಿ ದೊರೆಯುವಂತಾಗಬೇಕು. ಲೈಂಗಿಕ ಸಮಸ್ಯೆಗಳು, ಸಮಾಜದಲ್ಲಿ ಅಮಾನ್ಯತೆ ಪಡೆದಂತಹ ಸಲಿಂಗರತಿ–ಸಲಿಂಗಿಗಳ ಕುರಿತಾದ ವಿವರ ಎಲ್ಲದರ ಕುರಿತಾದ ಸರಿಯಾದ ಮಾಹಿತಿ ಆಸಕ್ತರಿಗೆ ಕೈಗೆಟಕುವಂತಾಗಬೇಕು. ಸಹಾಯಕ ದೂರವಾಣಿ ಕೇಂದ್ರಗಳು, ಅಂತರ್ಜಾಲ ತಾಣಗಳು ಈ ದಿಕ್ಕಿನಲ್ಲಿ ಉತ್ತಮ ಕಾರ್ಯ ನಿರ್ವಹಿಸಬಹುದು. ಪುರುಷರಂತೆಯೇ ಹೆಣ್ಮಕ್ಕಳು ಕೂಡ ಯಾವೊಂದು ಭೀತಿಯಿಲ್ಲದೆ ಸಮಾಜದಲ್ಲಿ ವ್ಯವಹರಿಸಲು ಅವಕಾಶ ಕಲ್ಪಿಸಿಕೊಡಬೇಕಾಗಿದೆ. ಹೆಣ್ಣಿಗೂ ಲೈಂಗಿಕಾಸಕ್ತಿ ಎನ್ನುವುದು ಇದೆ ಎನ್ನುವ ಅರಿವು ಪುರುಷರಲ್ಲಿ ಜಾಗ್ರತವಾಗಬೇಕಾಗಿದೆ. ಆದುದರಿಂದ ಲೈಂಗಿಕಕ್ರಿಯೆಯ ಕುರಿತು ಹೆಣ್ಣಿಗೆ NO ಹೇಳುವ ಅಧಿಕಾರದಂತೆಯೇ YES ಎನ್ನುವ ಅಧಿಕಾರವೂ ಇರಬೇಕು. ಅವಳಿಗಿಷ್ಟವಿಲ್ಲದಿದ್ದಲ್ಲಿ ವಿವಾಹಚೌಕಟ್ಟಿನಲ್ಲಿ ಸಹ ಲೈಂಗಿಕಕ್ರಿಯೆಯ ಒತ್ತಾಯ ಹೇರುವುದು ಅಪರಾಧವೆಂದು ಪರಿಗಣಸಲಾಗಿದೆ. ಅನಗತ್ಯ ಅನಪೇಕ್ಷಿತ ಗರ್ಭಧಾರಣೆಯನ್ನು ತಡೆಗಟ್ಟುವುದಕ್ಕಾಗಿ ಇರುವಂತಹ ಗರ್ಭನಿರೋಧಕ ಸಾಧನಗಳು, ಅವುಗಳನ್ನು ಬಳಸುವ ಕ್ರಮ, ಅವುಗಳಿಂದಾಗುವ ದುಷ್ಪರಿಣಾಮಗಳು ಎಲ್ಲವೂ ತಿಳಿದಿರಬೇಕು. ಸಂತಾನಧಾರಣೆಯ ಆಯ್ಕೆ ಅವಳಿಗಿರಬೇಕು. ಭ್ರೂಣಹತ್ಯೆ, ಲಿಂಗಪತ್ತೆ ಇತ್ಯಾದಿಗಳನ್ನು ವಿರೋಧಿಸುವ ಅಧಿಕಾರ ಹೆಣ್ಣಿಗಿರಬೇಕು. ಅತ್ಯಾಚಾರ ನಡೆದಾಗ ಅವಳನ್ನು ವಿಚಾರಣೆ ಒಳಪಡಿಸುವ ಕ್ರಿಯೆಯು ಸಂವೇದನಾಶೀಲವಾಗಬೇಕು. ಅತ್ಯಾಚಾರ ಹೆಚ್ಚುತ್ತಿರುವ ಪ್ರಸ್ತುತ ಸಮಯದಲ್ಲಿ ಹೆಣ್ಮಕ್ಕಳಿಗಾಗಲಿ ಗಂಡುಮಕ್ಕಳಿಗಾಗಲಿ ಒಳ್ಳೆಯ ಹಾಗೂ ಕೆಟ್ಟಸ್ಪರ್ಶದ ಕುರಿತು ಮಾಹಿತಿ ನೀಡುವಲ್ಲಿ ಜಾಗ್ರತೆ ವಹಿಸದಿದ್ದರೆ ಮಕ್ಕಳಿಗೆ ತಮ್ಮ ಆಸುಪಾಸಿನಲ್ಲಿರುವ ಯಾರೂ ವಿಶ್ವಾಸಕ್ಕೆ ಅರ್ಹರಲ್ಲ ಎನ್ನುವ ಆತಂಕದೊಂದಿಗೆ ತಮ್ಮ ಶರೀರದ ಕುರಿತಾಗಿ ಕೀಳರಿಮೆ ನಿರ್ಮಾಣವಾಗುವ ಸಾಧ್ಯತೆ ಇದೆ. ಮುಂದಕ್ಕೆ ಇದು ಆ ವ್ಯಕ್ತಿಯ ಲೈಂಗಿಕಾಸಕ್ತಿಗೆ ಮಾರಕವಾಗ ಬಹುದು. ಆದುದರಿಂದ ಕಾಳಜಿ ಅಗತ್ಯ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಬದಲಾಗುತ್ತಿರುವ ಸಂದರ್ಭದಲ್ಲಿ ಬೆಳೆಯುತ್ತಿರುವ ಮಕ್ಕಳಿಗೆ ಹಂತ–ಹಂತವಾಗಿ ನೀಡಬೇಕಾದ ಲೈಂಗಿಕ ಶಿಕ್ಷಣದ ರೂಪುರೇಷೆಗಳು ಇಂತಿರಬೇಕು:–

1. ಗಂಡು ಮತ್ತು ಹೆಣ್ಣಿನ ನಡುವಿನ ಶಾರೀರಿಕ ವ್ಯತ್ಯಾಸದ ವೈಜ್ಞಾನಿಕ ಮಾಹಿತಿ.

2. ವಯಸ್ಸಿಗೆ ಅನುಗುಣವಾಗಿ ನಡೆಯುವ ಶಾರೀರಿಕ – ಮಾನಸಿಕ ಪರಿವರ್ತನೆಗಳ ವಿವರಣೆ. ಋತುಚಕ್ರ, ಮಿಲನ, ಗರ್ಭಧಾರಣೆ, ಜನನ ಪ್ರಕ್ರಿಯೆಯ ಕುರಿತು ಗಂಡುಮಕ್ಕಳಿಗೂ ತಿಳಿವು ಅಗತ್ಯ.

3. ಮಾನಸಿಕ ಪರಿವರ್ತನೆಯನ್ನು ಅರಿತುಕೊಳ್ಳುವ ಸೂಕ್ತ ವಿಧಾನಗಳು

4. ಅಸ್ವಾಭಾವಿಕ ಶಾರೀರಿಕ ಹಾಗೂ ಮಾನಸಿಕ ಬದಲಾವಣೆಗಳನ್ನು ಬಹಿರಂಗಪಡಿಸುವ ಅಗತ್ಯ

**✍ ಡಾ. ಮಮತಾ ರಾವ್**

5. ಗರ್ಭನಿರೋಧಕ ವಿಧಾನಗಳು– ಗರ್ಭಪಾತದ ಸೌಲಭ್ಯಗಳ ಕುರಿತಾದ ಮಾಹಿತಿ.

6. ಹೆತ್ತವರು–ಶಿಕ್ಷಕರು ಹಿಂಜರಿಯುವಲ್ಲಿ ಪ್ರಸ್ತುತ ಲಭ್ಯ ಮಾಹಿತಿತಾಣಗಳ ಮೂಲಕ ಸರಿಯಾದ ಮಾಹಿತಿಗಳು ಕೈಗೆಟುಕುವಂತೆ ಮಾಡಬೇಕು; ಪ್ರಶ್ನೆಗಳನ್ನು ಕೇಳಲು ಪ್ರೋತ್ಸಾಹಿಸುವಂತೆಯೇ ಅದಕ್ಕೆ ಸೂಕ್ತ ಉತ್ತರವನ್ನು ನೀಡುವ ಸೌಲಭ್ಯಗಳನ್ನು ಸಹ ಕಲ್ಪಿಸಿಕೊಡಬೇಕು. ನವಿದೆಹಲಿಯ TARSHI ಎಂಬ ಸಂಸ್ಥೆಯು 'ಹಳದಿ ಪುಸ್ತಕ' ಎನ್ನುವ ಪತ್ರಿಕೆಯನ್ನು ಪ್ರಕಟಿಸುತ್ತಾ ಇಂತಹ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ನೀಡುವುದನ್ನು ಇಲ್ಲಿ ಉಲ್ಲೇಖಿಸಬಹುದು.

ಇಂದು ಆಧುನಿಕತೆಯ ಸಮಾನತೆಯ ಸಂದರ್ಭದಲ್ಲಿ ಮಹಿಳೆಯ ಸುರಕ್ಷೆ ದೊಡ್ಡ ಸವಾಲಾಗಿ ಜಗತ್ತನ್ನು ಕಾಡುತ್ತಿದೆ. ದಿನದಿಂದ ದಿನಕ್ಕೆ ಹೆಚ್ಚುತಿರುವ ಲೈಂಗಿಕ ಅತ್ಯಾಚಾರಗಳಿಗೆ ಮಹಿಳೆಯನ್ನೇ ದೂಷಿಸುವುದು ಸರಿಯಲ್ಲ. ಲಿಂಗತಾರತಮ್ಯವನ್ನು ಮೂಲದಿಂದ ಕಿತ್ತುಹಾಕಿ ಆರೋಗ್ಯ ಪೂರ್ಣ ಸಮಾಜವನ್ನು ನಿರ್ಮಿಸಬೇಕಾಗಿದೆ. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುತ್ತಿರುವಂತೆ, ಅವರ ತಮ್ಮ ಮಾನಸಿಕ ಹಾಗೂ ಶಾರೀರಿಕ ಬದಲಾವಣೆಯ ವಿಷಯದಲ್ಲೂ ಮಾರ್ಗದರ್ಶನ ನೀಡಿ ಬದುಕಿನಲ್ಲಿ ಹೆಣ್ಣು–ಗಂಡು ಎಂಬ ಭೇದವಿಲ್ಲದೆ ಸ್ವಂತದಂತೆಯೇ–ಪರರ–ಕೌಟುಂಬಿಕ ಹಾಗೂ ಸಾಮಾಜಿಕ ಕರ್ತವ್ಯಗಳನ್ನು ಹೊಣೆಗಾರಿಕೆಯನ್ನು ಸಮರ್ಥರೀತಿಯಲ್ಲಿ ನಡೆಸಿಕೊಳ್ಳುವಂತೆ ಸೂಕ್ತವಾದ ಲೈಂಗಿಕ ಜ್ಞಾನವನ್ನು ನೀಡುವುದು ಸಮಾಜದ ಆದ್ಯ ಕರ್ತವ್ಯ. ■

# ಆಷಾಢಸ್ಯ ಪ್ರಥಮ ದಿವಸೇ....

ಆಹ್ ಮಳೆಗಾಲ ಬರುತ್ತಿದೆ! ಮಳೆಯ ತುಂತುರು ಹನಿ ಇಳೆಯನ್ನು ಸೋಕುವ ಮೊದಲೇ ಹರಡುವ ಆ ಮಣ್ಣಿನ ಕಂಪು ಮೈಯಲ್ಲಿ ಏನೋ ಒಂದು ಆನಂದದ ಭಾವ ತುಂಬಿ ಹೃದಯಕ್ಕೆ ತಂಪೆರೆದು ಮನಸನ್ನು ಗರಿಗೆದರಿ ಹಾರಾಡುವಂತೆ ಮಾಡುತ್ತದೆ. ಭೂಮಿತಾಯಿಯೂ ಆ ಕಂಪನವನ್ನು ಅನುಭವಿಸುವಳಷ್ಟೆ! ಅದು ಅವಳ ಸೃಷ್ಟಿಯ ಸಕಲ ಚರಾಚರಗಳಲ್ಲಿ ಹರಿದು ಬರುವುದನ್ನು ಕಾಣಬಹುದು – ಮನುಷ್ಯರಲ್ಲಿ ಮಾತ್ರವಲ್ಲ, ಬಳ್ಳಿ–ಹಂಬುಗಳು, ಗಿಡ–ಮರಗಳು, ನದಿ–ನದ–ತೊರೆ–ಝರಿಗಳು, ಬೆಟ್ಟ–ಗುಡ್ಡಗಳು, ಪಶು–ಪಕ್ಷಿಗಳು, ಗದ್ದೆ–ತೋಟ–ಕಾನನಗಳು, ಎಲ್ಲೆಲ್ಲೂ ಆ ಸಂತಸದ ಉಯ್ಯಾಲೆಯ ಜೀಕು ಮೇಲೇರುತ್ತಿರುತ್ತದೆ. ಆ ಸಂತೋಷಭಾವವನ್ನು ಯಾವುದಾದರೂ ವೈಜ್ಞಾನಿಕ ಯಂತ್ರದಿಂದ ಅಳೆಯಲು ಬಹುದೇ?

ಮಳೆ ಜೀವನಚಕ್ರದ ಕೇಂದ್ರ ಭಾಗವಾಗಿರುತ್ತದೆ. ಅದರಲ್ಲೂ ನಮ್ಮ ಭಾರತದಂತಹ ಶೀತೋಷ್ಣ ಪ್ರದೇಶದಲ್ಲಿರುವವರಿಗಂತೂ ಮಳೆಯೇ ಜೀವನಾಧಾರ. ಮೊದಲ ಮಳೆ ಬರಬೇಕಾದರೆ ಸಾಧಾರಣವಾಗಿ ಗುಡುಗು ಮಿಂಚುಗಳ ಸಹಿತ ಬಂದು ಎಲ್ಲವನ್ನೂ ತೋಯಿಸಿ ಮೀಯಿಸಿ ನಿಲ್ಲುತ್ತದೆ. ಮಳೆಗಾಲ ಕಳೆಯುವ ಹೊತ್ತಿಗೆ ಇಳೆಯನ್ನು ಸಂಪತ್ಭರಿತಗೊಳಿಸಿ ಪುನ: ಗುಡುಗು ಮಿಂಚುಗಳ ಸಂಗೀತದೊಂದಿಗೆ ಬೀಳ್ಕೊಟ್ಟು ನಡೆಯುತ್ತದೆ. ನಿಜವಾಗಿಯೂ, ಋತುಚಕ್ರದಲ್ಲಿ ಮಳೆಯ ಕೊಡುಗೆಯನ್ನು ಬರವಣಿಗೆಯಲ್ಲಿ ಹಿಡಿದಿಡುವದು ಬರಿಯ ಸಾಹಸವೇ ಸರಿ.

ಪ್ರಕೃತಿಯಲ್ಲಿ ಆರು ಋತುಗಳು ಒಂದರ ಹಿಂದೆ ಒಂದು ಬಂದು ಹೋಗುತ್ತಿರುತ್ತವೆ – ವರ್ಷ, ಶರದ್, ಹೇಮಂತ, ಶಿಶಿರ, ವಸಂತ ಮತ್ತು ಗ್ರೀಷ್ಮ. ಪ್ರತಿಯೊಂದಕ್ಕೂ ಒಂದೊಂದು ನಿರ್ಧಾರಿತ ಸ್ಥಾನ ಮತ್ತು ನಿರ್ಧಾರಿತ ಕಾರ್ಯಕಾರಣವಿದೆ. ವಸಂತದಲ್ಲಿ ನವಪಲ್ಲವದ ಚಿಗುರಿನಿಂದ ಸಂತಸದ ಉತ್ಸಾಹ ಚಿಮ್ಮುವುದು ನಿಜವಾದರೂ, ಮಳೆಯೇ ಋತುಗಳ ನಾಯಕ. ಮಳೆರಾಯ ಮುನಿಸಿಕೊಂಡು ಮಾಯವಾದರೆ, ಎಲ್ಲ ಋತುಗಳೂ ಅರ್ಥ ಕಳೆದುಕೊಂಡು ನಿಸತ್ವವಾಗುತ್ತವೆ. ಅದೇ ಕಾರಣಕ್ಕೆ ಕವಿಶ್ರೇಷ್ಠ ಕಾಳಿದಾಸನೂ ತನ್ನ ಮಹಾಕಾವ್ಯ 'ಮೇಘದೂತ'ದಲ್ಲಿ 'ಆಷಾಢಮಾಸೇ ಪ್ರಥಮ ದಿವಸೇ' ಎಂದು ಆರಂಭಿಸಿ ಮಳೆಯ ಸೌಂದರ್ಯವನ್ನು ವರ್ಣಿಸಿ ಋತುಗಳಲ್ಲಿ ಮಳೆಯ ಸ್ಥಾನವನ್ನು ಭದ್ರಗೊಳಿಸಿದ್ದಾನೆ.

ಭೂತಾಯಿ ತನ್ನ ಸಂತೋಷವನ್ನು ತನ್ನಲ್ಲೇ ಇಟ್ಟುಕೊಂಡು ಸುಮ್ಮನಾಗುವುದಿಲ್ಲ. ಮಳೆ ಇಳೆಗೆ ಇಳಿಯುತ್ತಿರುವಂತೆಯೇ ಆಶ್ಚರ್ಯಕಾರಕ ರೀತಿಯಲ್ಲಿ ಒಂದು ಪ್ರಕ್ರಿಯೆ ಆರಂಭವಾಗುವುದು. ನಮ್ಮ ಇಡೀ ವರ್ಷದ ಭವಿಷ್ಯ ಅದರ ಮೇಲೆ ನಿರ್ಭರವಾಗಿರುತ್ತದೆ. ಎಲ್ಲೆಲ್ಲೂ ಹಸಿರು ಹಬ್ಬಿ ಕಣ್ಮನಗಳನ್ನು ತಣಿಸುತ್ತದೆ. ಇಡಿ ಪೃಥ್ವಿಗೆ ಹಸಿರುಡುಗೆಯನ್ನು ತೊಡಿಸಿದಂತೆ ಕಾಣುತ್ತದೆ. ಗಿಡ ಮರಗಳು, ಬಳ್ಳಿಗಳು, ಕಾನನ ಬೆಟ್ಟಗಳು, ಕಣಿವೆ ಕಂದರಗಳು, ಗದ್ದೆ ತೋಟಗಳು ಅಮೃತ ಉಂಡು ನವ ಯೌವನ ಪಡೆದಂತೆ ಕಂಗೊಳಿಸುತ್ತವೆ. ಪ್ರಕೃತಿಮಾತೆ ಸೃಷ್ಟಿಕರ್ತನ ಮೇಲ್ಮೆಯನ್ನು ಸಾರಲು ಮೆರವಣಿಗೆ ಹೊರಡಿಸಿದಂತೆ ಜೀವನೋತ್ಸಾಹ ಪುಟಿದೇಳುತ್ತದೆ. ಜೊತೆಗೆ ಸಂಗೀತದ ಮೇಳ ಸೇರಿಸಲು ವರ್ಷವೆಲ್ಲ ಅಡಗಿದ್ದ ಕಪ್ಪೆಗಳು ಒಮ್ಮೆಗೇ ತಮ್ಮ ವಟವಟವನ್ನು ನಡೆಸಿಯೇ ನಡೆಸುತ್ತವೆ.

ಮಳೆ ಮತ್ತು ಸೃಜನಕಾರ್ಯ ಒಂದರೊಳಗೊಂದು ಬೆರೆತಿವೆ. ಪ್ರಕೃತಿ ಚಕ್ರ ಸದಾ ತಿರುಗುತ್ತಲೇ ಇರಬೇಕಾಗಿರುತ್ತದೆ. ಮಳೆಗಾಲದಲ್ಲಿ ಹೊಸ ಸೃಷ್ಟಿಯ ಆರಂಭವಾಗುತ್ತದೆ. ಮನುಷ್ಯನಿಂದ ಹಿಡಿದು ಪ್ರಕೃತಿಯ ಪ್ರತಿಯೊಂದು ವಿಭಾಗದಲ್ಲೂ ಹೊಸ ಸಂತಾನೋತ್ಪತ್ತಿಯು ನಿಶ್ಚಿತ ಉದ್ದೇಶಕ್ಕೆ ಪೂರ್ವನಿರ್ಧಾರಿತ ರೀತಿಯಲ್ಲೇ ನಡೆಯುವುದು. ವಸಂತಕಾಲ ಸುಂದರವಾಗಿ ಕಾಣುವುದಾದರೂ ಅದರ ಮೂಲದಲ್ಲಿ ವರ್ಷಾಕಾಲವಿದೆ. ಪ್ರಕೃತಿಯು ಎಲ್ಲ ಆರು ಋತುಗಳೂ ಆರು ಜನ ಸ್ನೇಹಿತೆಯರಿದ್ದಂತೆ, ಪ್ರಕೃತಿ ಅವರಿಗೆ ಅವರದೇ ಆದ ವಿಶಿಷ್ಟಕಾರ್ಯವನ್ನು ಹಂಚಿ ಕೊಟ್ಟಿದೆ. ಪ್ರತಿಯೊಂದು ಋತುವಿಗೂ ಮುಂದಿನ ಋತುವಿನ ಪರಿಜ್ಞಾನವಿರುತ್ತದೆ. ಆದಿತ್ಯದೇವನ ಆಗಮನವು ದಿನಾರಂಭವನ್ನು ಸೂಚಿಸುವಂತೆ ವರ್ಷಾಕಾಲವು ಪ್ರಕೃತಿಯ ಚಕ್ರಕ್ಕೆ ಚಾಲನೆ ನೀಡುತ್ತದೆ. ಶರದೃತುವು ಮಳೆಯಲ್ಲಿ ಬಿತ್ತಿದ ಬೀಜಗಳನ್ನು ಧಾನ್ಯರೂಪದ ಸಂಪತ್ತಾಗಿ ಪರಿವರ್ತಿಸುತ್ತದೆ. ಹೇಮಂತ(ಛಳಿಗಾಲ)ದಲ್ಲಿ ಈ ಧಾನ್ಯಸಂಪತ್ತು ಕಣಜವನ್ನು ತುಂಬಿ ತುಳುಕುತ್ತದೆ. ಶಿಶಿರದಲ್ಲಿ ಛಳಿ ಹೆಚ್ಚಾಗಿ ಪ್ರೇಮೋಲ್ಲಾಸಕ್ಕೆ ಎಡೆಕೊಡುವ ಮೂಲಕ ವಸಂತಾಗಮನವನ್ನು ನಿರೀಕ್ಷಿಸುವಂತೆ ಮಾಡುತ್ತದೆ. ಶಿಶಿರದಲ್ಲಿ ಗಿಡ–ಮರಗಳು ಎಲೆಗಳನ್ನು ಕಳಚಿಕೊಂಡು ಬರಡಾದರೂ ವಸಂತದಲ್ಲಿ ನವ ಪಲ್ಲವದ ಚಿಗುರು ಮೂಡಿ ಸಂತಸವ ಉಣಿಸುತ್ತವೆ. ಆದರೆ ಬೆನ್ನಲ್ಲೇ ಬರುವ ಗ್ರೀಷ್ಮವು ಉರಿ ಉರಿಬಿಸಿಲಿನ ಅನುಭವ ಕೊಟ್ಟು ಎಲ್ಲೆಲ್ಲೂ ನೆಲ ಒಣಗಿ ಬಿರುಕು ಬಿಟ್ಟು ನೀರಿಗಾಗಿ ಹಪಹಪಿಸುವಂತೆ ಮಾಡುತ್ತದೆ. ಆಗ ನೋಡಬೇಕು ಮಳೆಯ ಅಬ್ಬರ! ಆ ಉಷ್ಣತೆಗೆ ಕೋಪಿಸಿಕೊಂಡು ಮಳೆರಾಯ ಭೂಮಿಯನ್ನು ಒಂದೇ ಸವನೆ ನೀರಿನಿಂದ ತೋಯಿಸಿ ತಂಪು ಮಾಡುವಂತೆ ಸುರಿಯುತ್ತಲೇ ಇರುವನು.

ಮಳೆಗೂ ಸಂಗೀತಕ್ಕೂ ಬಹಳ ನಿಕಟ ಸಂಬಂಧ. ಮಳೆಯ ಇನ್ನೊಂದು ಹೆಸರೇ ಮೇಘ. ಅದು ಮಳೆಗಾಲದ ರಾಗವೆಂದೇ ಪ್ರಸಿದ್ಧಿ. ಮೇಘರಾಗವು ಅತಿ ಗಂಭೀರ ರಾಗ. ಅದರೊಟ್ಟಿಗೆ ಮಲ್ಹಾರವೂ ಮಳೆಗೆ ಪ್ರಿಯವಾದುದು. ಎರಡರ ಸಂಗಮವೇ ಮೇಘಮಲ್ಹಾರ. ಹಾಗೆ ಅನೇಕ ರಾಗಗಳ ಸಂಗಮವಿರುವುದಾದರೂ, ಮೇಘಮಲ್ಹಾರದ ಆಳ, ಅದರಕ್ಲಿಷ್ಟತೆ, ಅದರ ಗಾಂಭೀರ್ಯ, ಅದರದೇ ಆದ ಸೌಂದರ್ಯ ಸುರಿಯುವ ಮಳೆಯಲ್ಲಿ ಅದು ನೀಡುವ ಅನುಭವ ವಿಶಿಷ್ಟವಾದುದು. ಆರಂಭದಲ್ಲಿ ನಿಧಾನವಾಗಿ ಸುರಿಯುವ ಹನಿಹನಿ ಮಳೆಯಲ್ಲಿ ಪ್ರಕೃತಿ ಸ್ತಬ್ಧವಾಂತೆ, ಮನೆಯ ಮಾಳಿಗೆಯ ಮೇಲಿನಿಂದ, ಗಿಡಮರಗಳ ಎಲೆಯ ತುದಿಯಿಂದ ಇಳಿಯುವ ಬಿಂದುಗಳು, ತೊರೆಯಾಗಿ ಹರಿಯುತ್ತ ಹೋದಂತೆ, ಗಾಳಿಯಲ್ಲಿ ಸರಸರ ಸದ್ದು, ಮಿಂಚಿನ ಬೆಳಕು, ನವಿಲಿನ ನೃತ್ಯ, ಹಾರುವ ಕಪ್ಪೆ, ಬೆದರಿ ಓಡುವ ಪ್ರಾಣಿಗಳ ಆರ್ಭಟ, ತುಂಬಿ ಹರಿಯುವ ನದಿ ತೊರೆಗಳ ನಿನಾದ, ತೋಯಿಸಿಕೊಂಡೂ ಸ್ಥಿರವಾಗಿ ನಿಂತ ಮರಗಿಡಗಳು, ಹೊಲಗದ್ದೆಗಳಲ್ಲಿ ನಗುತ್ತಿರುವ ಪೈರು, ಕಾನನದಲ್ಲಿ ಕುರಿ ಮೇಕೆ ದನ ಮೊದಲಾದವನ್ನು ಮೇಯಿಸಲು ಹೋದ ಹುಡುಗನ ಹಾಡು, ಮಳೆಯಲ್ಲಿ ನೆನೆದು ತಪ್ತವಾದ ಕಲ್ಲುಬಂಡೆಗಳು, ಅಲ್ಲೆಲ್ಲೋ ಗಿರಿಕಂದರದಲ್ಲಿ ಆಲಸ್ಯದಿಂದ ಬೀಸಾಗಿ ಮಲಗಿರುವ ಹುಲಿರಾಯ – ಮೇಘರಾಗವು ಕಟ್ಟಿಕೊಡುವ ಚಿತ್ರ ಜಗತ್ತು ಆಳವಾದ ಸುಶುಪ್ತತೆಯಲ್ಲಿ ಜಾರಿದಂತಿರುತ್ತದೆ. ಈ ಘನ ಗಂಭೀರ ರಾಗವನ್ನು ಅನುಭವಿಸುತ್ತ ಸುಖಿಸುತ್ತ ಹೋದಂತೆ ಮಳೆಯೆಂಬ ಪ್ರಕೃತಿಯ ವಿಶಿಷ್ಟವಾದ ಕೊಡುಗೆಯೊಡನೆ ನಾವು ಆತ್ಮೀಯತೆಯ ಭಾವವನ್ನು ಬೆಳೆಸಿಕೊಳ್ಳುತ್ತೇವೆ.

ರೈತರು ಅವರ ನೆಲವನ್ನು ಬಹಳ ಮೊದಲೇ ಉಳಲು ಆರಂಭಿಸುತ್ತಾರೆ. ಮೊದಲ ಕೂಸು ಬೇಗ ಹುಟ್ಟಿದಷ್ಟೂ ಒಳ್ಳೆಯದು ಎನ್ನುವ ಗಾದೆಯಂತೆ, ಮಳೆ ಬರುವುದು ಬೇಗಾದರೆ, ಬಿತ್ತುವುದೂ ಬೇಗ ಆಗುತ್ತದೆ. ಪೈರು ಕಾಲಕ್ಕೆ ತಕ್ಕಂತೆ ಬೆಳೆದು, ಒಳ್ಳೆ ಬೆಳೆ ಬರುವುದು. ಬಯಸಿದಂತೆ ಮಳೆ ಬಂದುದಾದರೆ ಅದೃಷ್ಟ ಬಾಯಿ ಬಿಟ್ಟಂತೆ. ಅಲ್ಪ ಸಮಯದಲ್ಲೇ, ಗದ್ದೆ ಹೊಲಗಳು ಹೊಸ ಬೆಳೆಯಿಂದ

ಹಸಿರಾಗುವವು. ಎಲ್ಲವೂ ಹಸಿರುಮಯ. ಕೆಲ ತಿಂಗಳಾದರೂ ಪ್ರಕೃತಿಯ ತೊಡುಗೆ ಅನೇಕ ಬಗೆಯ ಹಸಿರು ಛಾಯೆಯನ್ನು ಹೊಂದಿರುವುದು. ಕಾಲಕ್ರಮದಲ್ಲಿ ಪೈರು ಬೆಳೆದು ತೆನೆಕಟ್ಟಲಾರಂಭಿಸುವುದು. ಗಾಳಿಯಲ್ಲಿ ಅದರ ತೂಗಾಟ ಚೆನ್ನ. ಪ್ರಕೃತಿಯ ಈ ಎಲ್ಲ ಸಹಜ ಕ್ರಿಯೆಯಲ್ಲಿ ನಾವು ಬೆರಗುವಡೆದು ನಿಲ್ಲುವಂತಾಗುತ್ತದೆ. ಕಾಲಕ್ಕೆ ತಕ್ಕಂತೆ ಮಳೆ ಸುರಿದರೆ ರೈತನ ಸಂತೋಷ ಹೇಳತೀರದು. ಮುಖದಲ್ಲಿ ನಗು ತುಂಬಿ, ಅವನರಿಯದೆ ತಾನಾಗಿಯೇ ಅವನ ಗಂಟಲಿನಿಂದ ಹರಿದು ಬರುವುದು. ನನಗೆ ಹಿಂದಿ ಸಿನೇಮಾ 'ಮದರ್ ಇಂಡಿಯಾ'ದ ಹಾಡು ನೆನಪಾಗಿತ್ತಿದೆ – 'ದು:ಖ ಭರೆ ದಿನ್ ಬೀತೆರೆ ಭಯ್ಯಾ ಅಬ್ ಸುಖ್ ಅಯೋರೆ, ಜೀವನ್ ಮೆ ನಯಾ ರಂಗ್ ಲಾಯೋರೆ '. (ಇದು ಮೂಲ ಲೇಖಕರ ಹಾಡು, ನನಗೆ ನೆನಪಾಗುವುದು ಬೇಂದ್ರೆಯವರ 'ಮಳೆ ಬರುವ ಕಾಲಕ್ಕೆ ಒಳಗ್ಯಾಕ ಕುಂತೇವ, ಇಳೆಯೊಡನೆ ಜಳಕ ಮಾಡೋಣ ಹಾಡ ಹಾಡೋಣ'). ಮಳೆಯಲ್ಲಿ ತೇಲಿ ಹೋಗುವ ಮನಸ್ಸು ಎಲ್ಲಿ ಹೋಗಿ ನಿಲ್ಲುವುದೋ ಬಲ್ಲವರ್ಯಾರು? ಉತ್ಸಾಹ ಉಲ್ಲಾಸ ಏರಿ, ಪ್ರಕೃತಿಯೂ ಜೊತೆಗೂಡಿ ನಕ್ಕರೆ ಯಾರಿಗೆ ಸಂತೋಷವನ್ನು ತಡೆಯುವ ಅಧಿಕಾರ? ಅಬಾಲ್ಯವೃದ್ಧರಾದಿಯಾಗಿ ಎಲ್ಲರೂ ಅದರಲ್ಲಿ ಸಮನರೇ! ಅದರಲ್ಲೂ ಎಳೆಯ ಕಿಶೋರರು ತುಂಟತನ ಮಾಡದೆ ಬಿಟ್ಟಾರೆ? ಎಲ್ಲರ ಮೇಲೆ ನೀರಿನ ತೆರೆ ಹಾರಿಸುತ್ತ ಕೇಕೆ ಹಾಕಿದ್ದೇ ಹಾಕಿದ್ದು, ಮತ್ತೆ ಹಿರಿಯರಿಂದ ಬೈಸಿಕೊಂಡರೂ ಎಗ್ಗಿಲ್ಲ, ಹೊಡೆಸಿಕೊಂಡರೂ ತಡೆಯಿಲ್ಲ!

ನಾಣ್ಯಕ್ಕೆ ಎರಡು ಮುಖವಿರುವಂತೆ, ಮಳೆ ಕೆಲವರ ಮಟ್ಟಿಗಾದರೂ ದು:ಖವನ್ನೆ ತರುತ್ತದೆ, ಅದರಲ್ಲೂ ಬಡವರು, ತಗ್ಗಿನ ಮನೆಗಳಲ್ಲಿ ಇರುವವರು ಅತಿವೃಷ್ಟಿಯಾದಾಗ ಮಾಡು ಸೋರುವುದು, ಮನೆಯೆಲ್ಲ ನೀರು ತುಂಬಿ ಹೈರಾಣವಾಗುವುದು ನಗರ ಪ್ರದೇಶಗಳಲ್ಲಂತೂ ಈಗ ಬಹಳ ಸಾಮಾನ್ಯವಾಗಿದೆ. ಮನೆಗಳೇ ಕೊಚ್ಚಿ ಹೋಗುವುದೂ ಉಂಟು, ಎಷ್ಟೋ ಸಲ ಜನರೂ ಕೊಚ್ಚಿ ಹೋಗಿ ಸಾವು ನೋವುಗಳಾಗಿವೆ. ಆದರೆ ಪ್ರಕೃತಿಗೆ ನೋವು ನಲಿವು ಎರಡೂ ಒಂದೇ. ಹುಟ್ಟು ಸಾವುಗಳೆರಡೂ ಸೃಷ್ಟಿಯ ಅವಿಭಾಜ್ಯ ಅಂಗ. ಹುಟ್ಟಿನಲ್ಲಿ ಸಾವು, ಸಾವಿನಲ್ಲಿ ಹುಟ್ಟು ಒಂದರೊಳಗೊಂದು ಸೇರಿಹೋಗಿವೆ.

ಮಕ್ಕಳಾಗಿದ್ದಾಗ ನಾವು ಸ್ನೇಹಿತರು ತಿಂಡಿ ತಿಂದು, ಒಟ್ಟಾಗಿ, ಕೈಯಲ್ಲೊಂದು ಕೋಲು ಹಿಡಿದು, ದನಕರುಗಳನ್ನು ಹೊಡೆದುಕೊಂಡು ಮನೆಯಿಂದ ಹೊರಡುತ್ತಿದ್ದೆವು. ಮಾತಿನಲ್ಲಿ ದಾರಿ ಯಾವಾಗ ಸವೆಯಿತೋ, ಕಾಡು ಯಾವಾಗ ಹತ್ತಿತೋ ತಿಳಿಯುತ್ತಿರಲಿಲ್ಲ. ದಟ್ಟವಾದ ಕಾಡಿನಲ್ಲಿ ದನಕರುಗಳನ್ನು ಮೇಯಲು ಬಿಟ್ಟು ನಾವು ಹಾಡುತ್ತ, ಕುಣಿಯುತ್ತ, ಚೇಷ್ಟೆ ಮಾಡುತ್ತ, ಕೈಗೆ ಸಿಕ್ಕಿದ್ದನ್ನು ತಿನ್ನುತ್ತ, ಕಾಡಿನ ಪ್ರಪಂಚದಲ್ಲಿ ಮೈಮರೆತು ಕತ್ತಲಾದುದನ್ನೆ ತಿಳಿಯದೆ ಹೋಗುತ್ತಿದ್ದೆವು. ಹೈನುಗಳು ತಮ್ಮ ಪಾಡಿಗೆ ತಾವು ಕೊಟ್ಟಿಗೆ ಸೇರಿರುತ್ತಿದ್ದವು. ನಾವು ಮರಳಿ ಮನೆಗೆ ಬರುವಾಗ, ಸೂರ್ಯದೇವ ತನ ಮನೆ ಸೇರಿ ಎಷ್ಟೋ ಸಮಯ ಕಳೆದಿರುತ್ತಿತ್ತು.

ಈಗ ಕಾಡಿನ ಎಲ್ಲ ಮರಗಳೂ ಚಿಗುರಿ ಹಣ್ಣು ಬಿಟ್ಟಿರಬೇಕು. ಮಾವು, ಸೀಬೆ, ಹಲಸು, ಹುಣಿಸೆ, ಇನ್ನೂ ಹಲವು ಹತ್ತು ಬಗೆಯ ಕಾಯಿಗಳು, ಹಣ್ಣುಗಳು ನಾವು ಧ್ವಂಸ ಮಾಡುತ್ತಿದ್ದುದನ್ನು ನೆನೆಸಿಕೊಂಡರೆ ಮನಸ್ಸು ಚಂಚಲವಾಗಿತ್ತದೆ, ಹೃದಯ ಹಾಡಲಾರಂಭಿಸುತ್ತದೆ. ನನಗೆ ರೆಕ್ಕೆಗಳಿದ್ದರೆ ಅಲ್ಲಿಗೆ ಹಾರಿ ಹೋಗಬಹುದಿತ್ತೆ! ವಾಸ್ತವ ಕಣ್ಣ ಮುಂದೆ ಬಂದು ನಾನೀಗ ಮುದುಕನಾಗಿದ್ದೇನೆ ಎಂದು ಎಚ್ಚರಿಸುತ್ತಿದೆ. ಉತ್ತರ ರಾಮಚರಿತ ಮಾನಸದಲ್ಲಿ ಶ್ರೀ ರಾಮಚಂದ್ರನಾಡಿದ ಮಾತು ನೆನೆಪಾಗುತ್ತಿದೆ – 'ತೇ ಹಿ ನೋ ದಿವಸಾ ಗತಾ:' (ಆ ದಿನಗಳಿನ್ನು ಮರಳಿ ಬಾರವು).

–ಮೂಲ ಗುಜರಾತಿ: **ಡಾ. ಗಿರೀಶ್ ವೀಥಿವೋರಾ**

ಅನುವಾದ: **ಭವಾನಿ ಭಾರ್ಗವ**

## ಕರ್ನಾಟಕ ಸಂಗೀತ ಕ್ಷೇತ್ರದ ನಾಡ ಕಣ್ಮಣಿಗಳು
## ವಿದ್ವಾನ್ ಪಿಟೀಲು ತಾಯಪ್ಪ (ಪಿಟೀಲು ವಿದ್ವಾಂಸರು)



ಬೆಂಗಳೂರಿನ ಬಳೇಪೇಟೆ ನಿವಾಸಿ ಪಿಟೀಲು ವೀರ ಭದ್ರಪ್ಪನವರ ಮಗನಾಗಿ ದಿನಾಂಕ 3.11.1880ರಂದು ತಾಯಪ್ಪನವರು ಜನ್ಮ ತಾಳಿದರು. ಹುಟ್ಟಿದ ಮಗುವಿನ ಆಸಕ್ತಿ ಸಂಗೀತದ ಕಡೆ ಇದ್ದುದನ್ನು ಗಮನಿಸಿದ ವೀರಭದ್ರಪ್ಪನವರು ತಾವೇ ಮೊದಲ ಗುರುವಾಗಿ ಸಂಗೀತ ಶಿಕ್ಷಣವನ್ನು ಪ್ರಾರಂಭಿಸಿದರು. ಗಾಯನ ಹಾಗೂ ಪಿಟೀಲು ವಾದನ ಎರಡರ ಪಾಠಕ್ರಮವೂ ಮೊದಲಾಯಿತು. ಕಠಿಣ ಪರಿಶ್ರಮದಿಂದ ತಂದೆಯವರ ಮಾರ್ಗದರ್ಶನದಿಂದ ತಾಯಪ್ಪನವರು ಗಾನ – ವಾದನ ಎರಡರಲ್ಲಿಯೂ ಪರಿಣಿತರಾದರು. ಆದರೆ ದುರ್ದೈವ 1918ರಲ್ಲಿ ಊರಿನಲ್ಲಿ ವ್ಯಾಪಿಸಿದ ಇನ್ಫ್ಲುಯೆಂಜಾ ಪಿಡುಗು ಇವರಿಗೂ ಸೋಂಕಿ ಗಾಯನದ ಸಾಧನೆಗೆ ಮುಳುವಾಯಿತು. 1919 ನಡೆದ ಕಛೇರಿ ಸಮಯದಲ್ಲಿ ತಾಯಪ್ಪನವರು ಅಸ್ವಸ್ಥರಾಗಿ ಮುಂದೆ ಹಾಡುವುದು ಅಸಾಧ್ಯವಾಯಿತು. ಮೂರು ವರ್ಷದ ಸಾಧನೆಯ ನಂತರ ಗುಣಮುಖರಾದರೂ ಮುಂದೆ ಹಾಡಲು ಸಾಧ್ಯವಾಗಲಿಲ್ಲ. ಹೀಗಾಗಿ ಪಿಟೀಲು ವಾದನಕ್ಕೇ ಶರಣಾಗಬೇಕಾಯಿತು.

ಅದರಲ್ಲೇ ಪರಿಣಿತಿ ಹೊಂದಿ ಬೆಂಗಳೂರಿನಲ್ಲಿ ಪ್ರತಿಷ್ಠಿತ ಕಲಾವಿದರೆನಿಸಿ ಅವರ ಸಮಕಾಲೀನರಾದ ಬಿಡಾರಂ ಕೃಷ್ಣಪ್ಪ, ಚಿಕ್ಕ ರಾಮರಾಯರು, ಚಿಂತಲಪಲ್ಲಿ ವೆಂಕಟರಾಯರು, ಚಿಂತಲಪಲ್ಲಿ ರಾಮಚಂದ್ರರಾಯರು, ಬಿ.ಎಸ್. ರಾಜೈಂಗಾರ್, ಮುಂತಾದವರಿಗೆ ಇವರ ಪಿಟೀಲು ಸಹಕಾರ ಅನಿವಾರ್ಯವಾಯಿತು. ಇವರು ತಾಯ್ನಾಡಿಗೆ ಸಲ್ಲಿಸಿದ ಕಲಾಸೇವೆಯ ಹೆಗ್ಗುರುತಾಗಿ ಮೈಸೂರು ಸಂಸ್ಥಾನದ ನಾಡಾಪ್ರಭುಗಳಾದ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಇವರನ್ನು ಆಸ್ಥಾನ ವಿದ್ವಾಂಸರನ್ನಾಗಿ ನೇಮಿಸಿ ಗೌರವಿಸಿದರು. ಸಂಗೀತಕ್ಕೆ ಸಹವಾದ್ಯಗಾರರಾಗಿದ್ದುದೇ ಅಲ್ಲದೆ ನಾಟಕ ಕ್ಷೇತ್ರದಲ್ಲೂ ಇವರ ಸೇವೆ ಅವ್ಯಾಹತವಾಗಿ ಸಾಗಿದ್ದಿತು. ನಾಟಕ ಶಿರೋಮಣಿ ವರದಾಚಾರ್‌ರವರು ಇವರ ಪಿಟೀಲು ವಾದನಕ್ಕೆ ಮಾರು ಹೋಗಿದ್ದರು. ಇವರು ಬಹಳ ಅಪರೂಪ ಕಲಾವಿದರಾಗಿದ್ದರು. ಸಜ್ಜನರು. ಕಪಟವಿಲ್ಲದ ಕಲಾ ಸಹೃದಯರು. ಇವರ ಸಂಗೀತ ಕ್ಷೇತ್ರದ ಶಿಷ್ಯ ಸಮೂಹ ಅಪಾರವಾದುದು. ಬಿ.ಟಿ.ರಾಜಪ್ಪ (ಅವರ ಮಗ), ಆನೇಕಲ್ ಮುನಿಶಾಮಪ್ಪ, ಪುಟ್ಟಸ್ವಾಮಯ್ಯ, ಶಂಭುಲಿಂಗಪ್ಪ ಮುಂತಾದವರು ಪ್ರಮುಖರು. ಇಂತಹ ಮಹಾನ್ ಕಲಾವಿದ 1944 ನೇ ಇಸವಿ ಫೆಬ್ರವರಿ ತಿಂಗಳ ದಿನಾಂಕ 15 ರಂದು ಕಾಣದ ಲೋಕಕ್ಕೆ ಪಯಣಿಸಿದರು.

## ಇದು ನನ್ನ ಊರಿನಂತಿಲ್ಲ

ಇದು ನನ್ನ ಊರಿನಂತಿಲ್ಲ
ಗೆಳೆಯಾ
ಇದು ನನ್ನ ಊರಿನಂತಿಲ್ಲ.
ಅಂದು
ಸೂರ್ಯ ಮೂಡುವ ಮೊದಲೇ
ಮನೆಮಂದಿಗೆ ಎಚ್ಚರ
ತುಳಸಿ ಪ್ರದಕ್ಷಿಣೆ
ಎತ್ತು ಸೊತ್ತಿನ ಜೊತೆ
ಗದ್ದೆಯತ್ತ ಮುಖ
ಇದು ನನ್ನ ಊರಿನಂತಿಲ್ಲ
ಗೆಳೆಯಾ
ಇದು ನನ್ನ ಊರಿನಂತಿಲ್ಲ.
ಇಂದು ಸೂರ್ಯ ಮಾರುದ್ದ ಮೇಲೇರಿದ್ದಾನೆ
ತುಳಸಿ ಕಟ್ಟೆಯಿಲಲ
ಗದ್ದೆ ಉಳಲಿಕ್ಕಿದ್ದರೆ ತಾನೆ
ಎತ್ತಿರುವುದು
ಇದು ನನ್ನ ಊರಿನಂತಿಲ್ಲ
ಗೆಳೆಯಾ
ಇದು ನನ್ನ ಊರಿನಂತಿಲ್ಲ
ಅಂದು
ಬಾವಿ ಕಟ್ಟೆ ತೆಂಗು ಕಂಗು
ಪಚ್ಚೆ ಪೈರು
ಬೆಟ್ಟಗುಡ್ಡಗಳು
ಕೆರೆ ಕಾಲುವೆಗಳು
ಪಕ್ಕಿ ಪಾರಿವಾಳಗಳು
ಇದು ನನ್ನ ಊರಿನಂತಿಲ್ಲ
ಗೆಳೆಯಾ
ಇದು ನನ್ನ ಊರಿನಂತಿಲ್ಲ
ಇಂದು
ಬಾವಿ ಕಟ್ಟೆಯಿಲ್ಲ
ಎಲ್ಲೆಲ್ಲೂ ಬಿರುಕು ಬಿಟ್ಟ ಗದ್ದೆಗಳು
ತೆಂಗು ಕಂಗು ಬಾಡಿ ಬಸವಳಿದಿದೆ
ಪೈರು ಪಲಾಯನ ಮಾಡಿದೆ
ಕಾಳಿದ್ದರೆ ತಾನೆ ಹಕ್ಕಿ ಪಕ್ಕಿಗಳಿರುವುದು
ಇದು ನನ್ನ ಊರಿನಂತಿಲ್ಲ
ಗೆಳೆಯಾ
ಇದು ನನ್ನ ಊರಿನಂತಿಲ್ಲ
ನನ್ನೂರಿನಲ್ಲಿ ಎಲ್ಲವೂ ಇತ್ತು
ಕೂಡು ಕುಟುಂಬ
ಪ್ರೀತಿ ವಿಶ್ವಾಸ
ಮೊಗದಲಿ ನಗೆ ಸಂತೃಪ್ತಿ
ಇಂದು
ಊರೆಲ್ಲ ಭಣಗುಟ್ಟುತಿದೆ
ಮನೆಯಲಿ ವೃದ್ಧರು
ಅಸಹಾಯಕರು
ಮುಖದಲ್ಲಿ ಮಡುಗಟ್ಟಿದ
ದುಃಖ ನಿರಾಸೆ
ಇದು ನನ್ನ ಊರಿನಂತಿಲ್ಲ
ಗೆಳೆಯ
ಇದು ನನ್ನ ಊರಿನಂತಿಲ್ಲ.

**– ಡಾ. ಕರುಣಾಕರ್ ಶೆಟ್ಟಿ**

## ಹಂಬಲ



ಆ ದೇವರನ್ನು ನೋಡುವ ಹಂಬಲವೆನಗೆ
ಸಾರಿ ಸಾರಿ ಹೇಳಿದರೂ ಒಲ್ಲದೆನ್ನ ಹೃದಯ
ಪ್ರತಿ ಉಸಿರಿನಲ್ಲೂ ಅವನದೆ ನೆನಪು
ಕಾಣಲೇಬೇಕೆಂಬ ಹಂಬಲ ಮನದೊಳಗೆ

ತೇಲುವ ಮೋಡಗಳ ಲೆಕ್ಕ ಮಾಡುತ್ತಿರಲು ಅವನದೇ ಛಾಯೆ
ಕಂತು ಕಂತಾಗಿ ಹರಿದು ಬರುತ್ತಿವೆ ನಿಗೂಢತೆಯ ಮಾಯೆ
ಪ್ರಕೃತಿಯೊಳು ಅವಿತಿರುವ ನಿನ್ನ ನಿಷ್ಕಲ್ಮಷ ಅಂತರಾಳ
ಯಾರೂ ಅರಿಯದೆ ಹೋದರೇ ನಿನ್ನ ಮೌನದ ಮುಖವಾಡ

ರೆಕ್ಕೆ ಬಲಿಯದ ಮರಿಗಳ ರಕ್ಷಣೆಗೆ ಗೂಡು ಕಟ್ಟುವ ಶಕ್ತಿ
ಹಕ್ಕಿಗಿತ್ತವರು ಆ ದೇವರು ತಾನೆ?
ತನ್ನ ಕರುಳ ಕುಡಿಯ ನವಮಾಸ ಗರ್ಭದಲಿ ಹೊತ್ತು
ಹೆರುವ ಶಕ್ತಿ ಹೆಣ್ಣಿಗಿತ್ತವರು ಆ ದೇವರು ತಾನೆ?

ಆಸರೆ ನೀಡುವ ನೆಲ ಬಾಯಾರಿಕೆ ತಣಿಸುವ ಜಲ
ಕಣ್ಮನ ಸೆಳೆಯುವ ತಾರಾ ಮಂಡಲ
ಹಗಲಿಗೆ ಸೂರ್ಯ ರಾತ್ರಿಗೆ ತಂಪು ಬೆಳಕಿನ ಚಂದ್ರ
ಇವೆಲ್ಲದರ ಸೃಷ್ಟಿಕರ್ತ ಆ ದೇವರು ತಾನೆ?

ಸಕಲ ಜೀವಿಗಳಿಗೆ ಚೈತನ್ಯ ತುಂಬುವ
ಉದರ ಪೋಷಣೆಗೆ ಆಹಾರ ಹುಡುಕುವ ಶಕ್ತಿಯನಿತ್ತವ
ಬದುಕಲ್ಲಿ ಅಂಜದೆ ಬಾಳುವ ಸ್ಫೂರ್ತಿ ಕೊಟ್ಟವನ
ಒಮ್ಮೆ ಕಣ್ತುಂಬ ನೋಡುವ ಹಂಬಲವೆನಗೆ

ದೂರ ದೂರ ನಡೆದೆ ದಣಿವರಿಯದಂತೆ
ತಿಂಗಳಾಯಿತು ವರ್ಷವೂ ಕಳೆಯಿತು
ಕಾಣದ ದೇವರ ಹುಡುಕುವ ತವಕದಲ್ಲಿ
ಮರೆತಿದ್ದೆ ಮನೆಯಲ್ಲಿರುವ ತಾಯಿ ದೇವತೆಯನ್ನು

ಅಮ್ಮನ ಪ್ರೀತಿ ಮನದಲ್ಲಿ ಆವರಿಸಿತು
ಗಣಪನ ನೆನಪಾಗಿ ಮತ್ತೆ
ಮನೆಗೆ ಮರಳುವ ಮನಸ್ಸಾಯಿತು

**– ಅನಿತಾ ಪಿ. ಪೂಜಾರಿ, ತಾಕೊಡೆ**

# C L N Iyengar

C L N Iyengar was born to C Narasimha Iyengar and Seetamma on 19th June 1915 at Mysore. Narasimha Iyengar was working for Indian Railways, yet the two brothers, CLN(as he was popularly addressed) and Sheshadri completed their education in Mysore. After obtaining his Civil Engineering degree from UVCE in 1938, CLN, came to Mumbai (then Bombay) and joined the Concrete Association of India at first as unpaid apprentice and then joined ACC Ltd. By the time he came to Bombay, he was married to Kamalamma (30th May 1937).

In due course of time with his diligence and hard work, he rose up in ranks and retired in 1975 as Senior Engineer. He was a specialist in Concrete Road constructions and Highway Engineering. He was the first engineer to be selected by IRTDA in 1950 for 16 months' intensive training in highway and traffic engineering in USA, UK & Europe. He obtained a Graduateship in Highway Traffic Engineering at Yale University (IV league) in 1951.

All the concrete roads built by the Bombay Municipal Corporation from 1950s to the early 1970s were taken up primarily at his instigation and they were planned and constructed directly under his guidance. He also undertook special training as a fellow of the International Road Federation in 1950-51. In recognition of his work, the Government of India appointed him as a member of the study group on Road Safety.

He has also lectured at the post graduates courses at Roorkee University and conducted several training courses in Concrete Association of India for highest levels in the profession in railways, PWDs etc. He was also a faculty at the Institution of Engineers. Apart from this he was a regular writer to professional journals.

His interests in sports ranged from Cricket to Table Tennis, Billiards, Bridge, Rummy and Carom. He was a Wicket Keeper-Captain in for university Team and also was part of his Company Team in Times Shield matches.

He was an avid reader and had a large collection of books. He was also interested in photography, cooking, music, specially Karnatak music, philosophy and spirituality, and travelling especially by road with family.

Social & Religious Involvements:

- He was on the board of Mysore Association, NKES, Krishna Sabha, Deshika Sabha, Kannada Kala Kshetra and held various administrative titles.
- Active in Astika Samaj, Bhajana Samaj, Shanmukhananda Sabha, Ahobila Matham

**Ironic twist:**

Man who built the arterial roads of the biggest metropolis Mumbai and an authority on road safety was paralyzed in a road accident in the remote hamlet of Vijaywada due to an incorrectly laid speed-breaker, sometime in 1983. This accident took a physical and mental toll on him and he left for his heavenly abode on 6th April 1995.

The Family

He had 3 daughters and 2 sons, all are married and settled in life. He has 8 grandchildren who continue to follow in his footsteps of academic excellence in various fields. He has 5 great grandsons!

Association with The Mysore Association, Mumbai

CLN Iyengar became a member of the Association as early as 1938 as soon as he came to Mumbai and became its regular sports member. After his return from UK in 1951, he served as a member of the Managing Committee from 1952 to 1958. He was served as its President from 1958-59. Under the Presidentship of Shri. Muttanna between 1965-69, he was instrumental in supervising construction and completion of the second and third floor of Mysore Association building, with an auditorium and 3 rooms for visitors.





**Professional Achievements:**

- Member of the study group on Road Safety- appointed by Government of India. One of the principal members of the drafting committee which submitted an exhaustive report after a country wide extensive inspection and enquiry in June 1973
- Member of the ISI committees on concrete ever since 1947.
- Vice president of the Safety First Association of India.

Major professional contributions:

- Evaluation of Rigid Pavement performance with special reference to airports
- Transport problems and transport facilities of Bombay
- Strength tests of concrete measures towards better quality control

He was a part of the drafting committees on the following topics:

- Guidelines for control of access on highways
- Type design for 200 meter stones
- Treatment of embankment slopes for erosion control
- Specification for coarse and fine aggregates from natural sources for concrete

The family of Shri. C.L.N.Iyengar is celebrating the Birth Centenary of Shri. CLN at Mysore Association on 21st June 2015 at 10.30 a.m. As a part of the programme, a Bharata Natya performance titled "KRISHNASYA DAASOSMYAHAM" by Nrithyodaya Mumbai is arranged. The dance showcases the lives and works of Haridasas of Karnataka, primarily Kanaka Dasa and Purandara Dasa .

To commemorate the event there will be a Audio-visual presentation on the life of CLN. The family also plans to make a contribution to NKES in his memory.

**- Dr. Manjunath**

Date of Publication : 10th of every month RNI No. 040015 / 83
MNE / 93 / 2015-17 Date of Posting: 10/11th of every month at Mumbai
Patrika Channel Sorting Office G.P.O.

# ಮೈಸೂರು ಅಸೋಸಿಯೇಷನ್, ಮುಂಬಯಿ

ಮತ್ತು

## ಶ್ರೀ ಸಿ.ಎಲ್.ಎನ್. ಅಯ್ಯಂಗಾರ್ ಕುಟುಂಬ



ಜಂಟಿಯಾಗಿ ಆಯೋಜಿಸಿರುವ

## ಶ್ರೀ ಸಿ.ಎಲ್.ಎನ್. ಅಯ್ಯಂಗಾರ್ "ಜನ್ಮ ಶತಾಬ್ದಿ" ಸಮಾರಂಭ

ರವಿವಾರ 21ನೇ ಜೂನ್, 2015 ಬೆಳಗ್ಗೆ 10.30 ಘಂಟೆಗೆ

ಕಾರ್ಯಕ್ರಮ : ಮುಂಬಯಿಯ ನೃತ್ಯೋದಯ ತಂಡದವರಿಂದ

**"ಕೃಷ್ಣಸ್ಯ ದಾಸೋಸ್ಮ್ಯಹಮ್"**

ನೃತ್ಯ ಪ್ರದರ್ಶನ.

ಕಾರ್ಯಕ್ರಮದ ನಂತರ ಪ್ರೀತಿ ಭೋಜನದ ಏರ್ಪಾಡಿದೆ.

ಸ್ಥಳ : ಮೈಸೂರು ಅಸೋಸಿಯೇಷನ್ ಸಭಾಂಗಣ
393, ಭಾವುದಾಜಿ ರಸ್ತೆ, ಮಾತುಂಗ (ಪೂರ್ವ),
ಮುಂಬೈ – 400 019.
ದೂರವಾಣಿ : 022 2402 4647 / 2403 7065.

*ತಮಗೆಲ್ಲರಿಗೂ ಆತ್ಮೀಯ ಸ್ವಾಗತ*

## ಕೇಸರಿ ಬಾದಾಮಿ ಹಾಲು



**ಬೇಕಾಗುವ ಸಾಮಗ್ರಿಗಳು:–** ಹಾಲು 1 ಲೀಟರ್, ಕೇಸರಿ ಸ್ವಲ್ಪ, ಜಾಯಿಕಾಯಿಪುಡಿ ಚಿಟಿಕೆ, ಏಲಕ್ಕಿ ಚಿಟಿಕೆ, ಜೇನುತುಪ್ಪ 1 ಟೀ ಸ್ಪೂನ್, ರೋಜ್ ವಾಟರ್ 8 ಡ್ರಾಪ್ಸ್ (ಹನಿಗಳು)

**ರುಬ್ಬುವುದಕ್ಕೆ:–** ಹಾಲು ಸ್ವಲ್ಪ, ಸಿಪ್ಪೆ ಸುಲಿದ ಬಾದಾಮಿ 1 ಕಪ್, ಪಿಸ್ತಾ 1/4 ಕಪ್ ಇವೆಲ್ಲವನ್ನು ಗಟ್ಟಿಯಾಗಿ ರುಬ್ಬಿಟ್ಟುಕೊಳ್ಳಿ .

ವಿಧಾನ:– ಒಂದು ಪ್ರೆಷರ್ ಪ್ಯಾನ್ ನಲ್ಲಿ ಹಾಲನ್ನು ಹಾಕಿ ಕಾಯಿಸಿ. ಅದಕ್ಕೆ ಕೇಸರಿ ಜಾಯಿಕಾಯಿಪುಡಿ ಏಲಕ್ಕಿಯನ್ನು ಸೇರಿಸಿ ಚೆನ್ನಾಗಿ ಕಲಕಿರಿ. ರುಬ್ಬಿದ ನಂತರ ಜೇನುತುಪ್ಪ, ರೋಜ್ ವಾಟರ್ ನ್ನು ಸೇರಿಸಿ ಚೆನ್ನಾಗಿ ಕಲಕಿರಿ. 15 ನಿಮಿಷ ಕಡಿಮೆ ಉರಿಯಲ್ಲಿ ಬೇಯಿಸಿ.

## ಮ್ಯಾಂಗೋ ಪೈನಾಪಲ್ Smoothie




ಬೇಕಾಗುವ ಸಾಮಗ್ರಿಗಳು:– ಮ್ಯಾಂಗೋ pulp1 ಕಪ್, ಪೈನಾಪಲ್ ಜ್ಯೂಸ್ 1/2 ಕಪ್, ಪೈನಾಪಲ್ ಹೋಳು 1 ಕಪ್, ಮೊಸರು 1 ಕಪ್, ಬಾಳೆಹಣ್ಣು 1, ವೆನಿಲಾ ಎಸೆನ್ಸ್ 1 ಟೀ ಸ್ಪೂನ್
ವಿಧಾನ:– ಮೇಲಿನ ಎಲ್ಲಾ ಸಾಮಗ್ರಿಗಳನ್ನು ಮಿಕ್ಸರ್‌ಗೆ ಹಾಕಿ ಚೆನ್ನಾಗಿ ಗ್ರೈಂಡ್ ಮಾಡಿ. ನಂತರ ಇದನ್ನು 2–3 ಗ್ಲಾಸುಗಳಿಗೆ ತುಂಬಿಸಿ ಪಿಸ್ ತೇಲಿಬಿಟ್ಟು ಸವಿಯಲು ಕೊಡಿ.

## ಶ್ಯಾವಿಗೆ ಮತ್ತು ಮಾವಿನಹಣ್ಣು ಬರ್ಫಿ



ಬೇಕಾಗುವ ಸಾಮಗ್ರಿಗಳು: ತುಪ್ಪ 2 ಟೀ ಸ್ಪೂನ್, ತುಂಡು ಮಾಡಿದ ಪಿಸ್ತಾ – ಬಾದಾಮಿ 3 tbsp, ಹುರಿದ ಶ್ಯಾವಿಗೆ 1 1/2 ಕಪ್, 200 ಗ್ರಾಂ (1 tin) Mothers condensed milk, ಮಾವಿನ ಹಣ್ಣಿನ pulp 2, ಕೇಸರಿ ಸ್ವಲ್ಪ
ವಿಧಾನ: ಬಾಣಲೆ ಒಲೆಯ ಮೇಲಿಟ್ಟು ತುಪ್ಪ ಹಾಕಿ ಅದು ಬಿಸಿಯಾದಾಗ ಪಿಸ್ತಾ –ಬಾದಾಮಿಯನ್ನು ಸೇರಿಸಿ ಚೆನ್ನಾಗಿ ಹುರಿಯಿರಿ. ಹುರಿದ ಶ್ಯಾವಿಗೆ (Bambino roasted vermicelli) condensed milk, ಮಾವಿನಹಣ್ಣಿನ ಕೇಸರಿನ್ನು ಹಾಕಿ ತೊಳಸಿ ಪಾಕ ಗಟ್ಟಿಯಾಗುತ್ತ ಬಂದಾಗ ಉಳಿದ ತುಪ್ಪ ಹಾಕಿ 10 ನಿಮಿಷ ತೊಳಸುತ್ತಾ ಇರಿ. ಬದಿ ಬಿಡುತ್ತಾ ಬಂದಾಗ ಕೇಸರಿ ಹಾಕಿ ಇಳಿಸಿ. ನಂತರ ತುಪ್ಪ ಸವರಿದ ತಟ್ಟೆಗೆ ಹಾಕಿ, ತಣಿದ ನಂತರ ತುಂಡುಗಳಾಗಿ ಮಾಡಿ ತಿಂದು ನೋಡಿ

**ಕಿವಿ ಮಾತು:** ಶ್ಯಾವಿಗೆ ಅಂದರೆ (Bambino roasted vermicelli ಇದನ್ನು ಉಪಯೋಗಿಸಿ)

– ಶ್ರೀಮತಿ ಭಾವನಾ ಮಧುಸೂದನ್
Mob.: 9920966497



ಅಸೋಸಿಯೇಶನ್‌ನ ಸಕ್ರೀಯ ಸದಸ್ಯರಾದ ಅನುಸೂಯ ಅಯ್ಯಂಗಾರ್ ದಂಪತಿಗಳು ಮುಂಬಯಿಯಿಂದ ಬೆಂಗಳೂರಿಗೆ ವಾಸ ಸ್ಥಳವನ್ನು ವರ್ಗಾಯಿಸಿದ್ದರಿಂದ ಅಸೋಸಿಯೇಶನ್‌ನ ವತಿಯಿಂದ ಬೀಳ್ಕೊಡುಗೆ ಸಮಾರಂಭವನ್ನು ಇತ್ತೀಚೆಗೆ ಹಮ್ಮಿಕೊಳ್ಳಲಾಯಿತು.

## ಹೇಮಾ ಸದಾನಂದ ಅಮೀನ್‌ರಿಗೆ ಕುವೆಂಪು ಕಾವ್ಯ ಪುರಸ್ಕಾರ



ಲೇಖಕಿ, ಕವಯತ್ರಿ, ಕತೆಗಾರರಾಗಿ ಹೆಸರು ಮಾಡಿದ ಹೇಮಾ ಸದಾನಂದ ಅಮೀನ್‌ರವರು. ಮೂಲತಃ ಅಡ್ವೆ ಕಟೀಲಿನವರು. ಬಿ.ಎ. ಪಧವೀದರಾದ ಇವರು ಸಾಹಿತ್ಯ, ಕಲೆ, ಸಂಘಟನೆ ಹಾಗೂ ಪ್ರವಾಸದ ಹವ್ಯಾಸವುಳ್ಳವರು. ಶೀಯಾ ಬೆಳಕು ಪತ್ರಿಕೆಯ ಸಲಹಾ ಸಂಪಾದಕಿಯರಾಗಿ ಸಾಹಿತ್ಯಿಕ ಸೇವೆಯಲ್ಲಿ ನಿರತರಾಗಿದ್ದಾರೆ. ಇವರ ಕತೆ, ಕವನಗಳಿಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಮೈಸೂರಿನ ಗ್ರಾಮಾಂತರ ಬುದ್ಧಿಜೀವಿಗಳ ಸಂಘ ಪ್ರತಿ ವರ್ಷ ಕೊಡಮಾಡುವ 'ಕುವೆಂಪು ಕಾವ್ಯ ಪುರಸ್ಕಾರ'ಕ್ಕೆ ಆಯ್ಕೆಯಾಗಿದ್ದಾರೆ. ಇವರಿಗೆ ನೇಸರುವಿನ ಪರವಾಗಿ ಅಭಿನಂದನೆಗಳು.

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938